18 ಅಕ್ಟೋಬರ್ 2025 ಶನಿವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 218 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಜನಮನದ ದನಿ

ಪ್ರಜೋದಯ

ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ

ಕೇಂದ್ರ ಸರ್ಕಾರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಹಾಸನದಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಮೆಗಾಡೇರಿ ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿ ವೀಕ್ಷಿಸಿದರು. ಮಾಜಿ ಸಚಿವ ಹೆಚ್.ಡಿ.ರೇವಣ್ಣ, ವಿಧಾನ ಪರಿಷತ್ ಸದಸ್ಯ ಎಸ್.ಎಲ್.ಭೋಜೆಗೌಡ ಇದ್ದರು.

ಜನಪದರ ಆಚಾರ ನಂಬಿಕೆಗಳ ಅಧ್ಯಯನ ಹಾಸನ ಸೀಮೆಯ ಐತಿಹ್ಯಗಳು » 2

ಕಣ್ಮನ ಸೆಳೆದ ಫಲಪುಷ್ಪ ಪ್ರದರ್ಶನ » 3

ಸಂಘದ ಬೈಠಕ್‌ಗೆ ಬಂದು ಮಾತನಾಡಲಿ » 4

ಕಾಂಗ್ರೆಸ್ ವಿರುದ್ಧ ಹೆಚ್.ಡಿ.ಕೆ. ವಾಗ್ಬಾಣ

ಅಧಿಕಾರ ಯಾರಪ್ಪನ ಆಸ್ತಿಯಲ್ಲ : ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಕೇಂದ್ರ ಸಚಿವ ಹೆಚ್‌ಡಿಕೆ ತಿರುಗೇಟು

• ಪ್ರಜೋದಯ ವರದಿ

ಹಾಸನ: ಮುಖ್ಯಮಂತ್ರಿಯಾಗಿ ದೇವರಾಜ ಅರಸು ಅವರ ಕಾಲಾವಧಿ ಮುಗಿಸಿದ ಮಾತ್ರಕ್ಕೆ ಅವರಂತೆ ನಿಮ್ಮ ಹೆಸರು ಶಾಶ್ವತವಾಗಿ ಉಳಿಯುವುದಿಲ್ಲ, ಇರುವಷ್ಟು ದಿನ ಏನು ಕೆಲಸ ಮಾಡಿದ್ದೀರಿ ಎಂಬುದು ಮುಖ್ಯ. ನಾಡಿನ ಜನರಿಗಾಗಿ ಶಾಶ್ವತ ಕೆಲಸಗಳನ್ನು ಏನು ಮಾಡಿದ್ದೀರಿ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದರು.

ಶಾಸಕ ಹೆಚ್.ಪಿ.ಸ್ವರೂಪ್ ಅವರ ನಿವಾಸದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ಟೀಕಾ ಪ್ರಹಾರ ನಡೆಸಿದ ಅವರು, ಕಾಂಗ್ರೆಸ್ ಸರ್ಕಾರದಿಂದ ಯಾವ ಅಭಿವೃದ್ಧಿ ಕೆಲಸಗಳೂ ಆಗುತ್ತಿಲ್ಲ. ಎಲ್ಲರೂ ಆಕಾಶದಲ್ಲೇ ಹಾರಾಡುತ್ತಿದ್ದಿರಿ. ನೆಲಕ್ಕೆ ಇಳಿದು ಸ್ವಲ್ಪ ಜನರ ಸಮಸ್ಯೆಗೆ ಕಿವಿಯಾಗಿ. ನಿಮ್ಮ ಎಷ್ಟು ಶಾಸಕರು ಜನರ ಸಮಸ್ಯೆ ಕೇಳಿದ್ದಾರೆಂದು ಪ್ರಶ್ನಿಸಿದರು.

ನಾಶದ ಕನಸು ಕಂಡವರಿಗೆ ಉತ್ತರ

ಹಲವು ತಿಂಗಳಿಂದ ನಾನು ಅನಾರೋಗ್ಯದಿಂದ ಬೇರೆ ಸಮಸ್ಯೆ ಎದುರಿಸುತ್ತಿದ್ದೆ. ನಮ್ಮ ಪಕ್ಷದ ಬಗ್ಗೆ ಅನುಮಾನ ಇದ್ದವರು, ಪಕ್ಷವನ್ನು ಸರ್ವನಾಶ ಮಾಡಬೇಕೆಂದು ಅಂದುಕೊಂಡಿದ್ದವರಿಗೆ ಈಗ ಉತ್ತರ ಸಿಕ್ಕಿದೆ. ಗುರುವಾರ ಮಂಡ್ಯದಲ್ಲಿ ಕಾರ್ಯಕರ್ತರೊಂದಿಗೆ ಸಭೆ ನಡೆಸಿದ್ದೇನೆ. ದೀಪಾವಳಿ ಬಳಿಕ ರಾಜ್ಯಾದ್ಯಂತ ಸುತ್ತಾಟ ನಡೆಸುತ್ತೇನೆ. ಜನಮಾನಸದಿಂದ ನಾನು ದೂರ ಸರಿಯುವ ಪ್ರಶ್ನೆಯೇ ಇಲ್ಲವೆಂದರು.

ಮೈತ್ರಿ ಪಕ್ಷಕ್ಕೂ ಕಿವಿ ಹಿಂಡಿದ ಹೆಚ್.ಡಿ.ಕೆ.

ಉತ್ತರ ಕರ್ನಾಟಕದ ಐದು ಜಿಲ್ಲೆಗಳಲ್ಲಿ ಅತಿವೃಷ್ಟಿಯಿಂದ ರೈತರು ಭಾರೀ ತೊಂದರೆ ಅನುಭವಿಸ ಬೇಕಾಯಿತು. ಈ ವಿಚಾರದಲ್ಲಿ ಆಡಳಿತ ನಡೆಸುತ್ತಿರುವವರು ಹಾಗು ಮೈತ್ರಿ ಪಕ್ಷದ ನಮ್ಮ ಸ್ನೇಹಿತರು ಹೇಗೆ ನಡೆದುಕೊಂಡರೆಂಬುದನ್ನು ಗಮನಿಸಿದ್ದೇನೆ. ಯಾವ ವಿಷಯವಾಗಿ ಆಡಳಿತ ಪಕ್ಷ ಗಮನ ಹರಿಸಬೇಕು. ವಿರೋಧ ಪಕ್ಷವಾಗಿ ನಮ್ಮ ಜವಾಬ್ದಾರಿ ಏನೆಂಬುದನ್ನು ಅರಿಯಬೇಕು. ಈ ನಿಟ್ಟಿನಲ್ಲಿ ಕೆಲಸಗಳಾಗಿಲ್ಲವೆಂದು ಅಸಮಾಧಾನ ವ್ಯಕ್ತಪಡಿಸಿದರು.

ಕಳೆದ ಎರಡೂವರೆ ವರ್ಷಗಳಿಂದ ರಾಜ್ಯದಲ್ಲಿ ಯಾವ ಅಭಿವೃದ್ಧಿಯೂ ಆಗಿಲ್ಲ. ವೈಫಲ್ಯ ಮುಚ್ಚಿಕೊಳ್ಳಲು ಜನರ ಗಮನ ಬೇರೆಡೆ ಸೆಳೆಯುತ್ತಿದ್ದಾರೆ. ಪ್ರವಾಹ ಪರಿಸ್ಥಿತಿಯಲ್ಲಿ ಸರ್ಕಾರ ವರ್ತಿಸಿದ ರೀತಿ ಬೇಸರ ತರಿಸಿತು. ಎನ್‌ಡಿಆರ್‌ಎಫ್‌ನಿಂದ ಹಣ ಬಂದ ಬಳಿಕ ಪ್ರತಿ ಹೆಕ್ಟೇರ್ ಬೆಳೆ ನಷ್ಟಕ್ಕೆ 8,500 ರೂ. ಹೆಚ್ಚುವರಿಯಾಗಿ ಕೊಡುವುದಾಗಿ ಹೇಳಿದ್ದಾರೆ. ನಷ್ಟ ಸಮೀಕ್ಷೆ ನಡೆಸುವಂತೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದಾರೆಯೇ ಎಂದು ಪ್ರಶ್ನಿಸಿದರು.

ಖಜಾನೆ ತುಂಬಿಸಲು ರಾಜ್ಯ ಸಮರ್ಥ

ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ನಾನು ಯಾವತ್ತೂ ಟೀಕಿಸಿಲ್ಲ. ಎಷ್ಟೇ ಅಸಮರ್ಥ ಸರ್ಕಾರ ಅಧಿಕಾರಕ್ಕೆ ಬಂದರೂ ಖಜಾನೆ ತುಂಬಿಸಲು ರಾಜ್ಯದ ಜನರು ಸಮರ್ಥರಿದ್ದಾರೆ. ಗ್ಯಾರಂಟಿ ಯೋಜನೆಗಳಿಂದ ಸರ್ವತೋಮುಖ

» ನಾಲ್ಕನೇ ಪುಟದಲ್ಲಿ

ರಾಜ್ಯದ ಅಭಿವೃದ್ಧಿ ವಿಚಾರವಾಗಿ ಕೇಂದ್ರ ಸರ್ಕಾರದೊಂದಿಗೆ ಚರ್ಚಿಸಲು ನಮಗಿರುವ ಶಕ್ತಿ, ಧೈರ್ಯವನ್ನು ಕಾಂಗ್ರೆಸ್ ಮುಂದೆ ಪ್ರದರ್ಶಿಸಬೇಕಾ. ಕೇಂದ್ರದಿಂದ ಬಿಡುಗಡೆಯಾದ ಅನುದಾನಕ್ಕೆ ಇವರ ಪಾಲು ನೀಡದೆ ಎಷ್ಟು ಹಣ ಹಾಗೆ ಉಳಿದಿದೆ ಎಂಬ ಮಾಹಿತಿ ಕೊಡುತ್ತೇನೆ. ವೃಥಾ ಆರೋಪ ಮಾಡುವುದು ಬಿಟ್ಟರೆ ರಾಜ್ಯ ಸರ್ಕಾರ ಬೇರೆ ಯಾವ ಕೆಲಸ ಮಾಡುತ್ತಿಲ್ಲ.

-ಹೆಚ್.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ

ಮುಖ್ಯಾಂಶಗಳು

- ಅಸಮರ್ಥ ಸರ್ಕಾರಗಳಿದ್ದರೂ ರಾಜ್ಯದ ಖಜಾನೆ ಬರಿದಾಗುವುದಿಲ್ಲ
- ಖಡ್ಗಮಾಲಾ ಪೂಜೆಗಿಂತ ಜನರ ಮನಸ್ಸು ಗೆಲ್ಲಬೇಕು
- ನಮ್ಮ ಶಕ್ತಿ, ಧೈರ್ಯವನ್ನು ಕಾಂಗ್ರೆಸ್ ಮುಂದೆ ಪ್ರದರ್ಶಿಸಬೇಕಾ
- ಅವಧಿ ಮುಗಿಸಿದ ಮಾತ್ರಕ್ಕೆ ದೇವರಾಜ ಅರಸು ಆಗಲ್ಲ

ನೆಹರೂಗೆ ಅಸಾಧ್ಯವಾಯ್ತು ನಿಮ್ಮಿಂದ ಆಗುತ್ತಾ?

ರಾಷ್ಟ್ರೀಯ ಸ್ವಯಂ ಸೇವಕ ಸಂಘವನ್ನು ಸಾರ್ವಕಾಲಿಕವಾಗಿ ಬ್ಯಾನ್ ಮಾಡುವುದು ಸಾಧ್ಯವಿಲ್ಲ. ಇಂತಹ ವಿಷಯಗಳಿಗೆ ಏಕೆ ಪ್ರಾಮುಖ್ಯತೆ ಕೊಡುತ್ತಿದ್ದಾರೆಂಬುದೇ ಅರ್ಥವಾಗುತ್ತಿಲ್ಲ. ಈ ಸರ್ಕಾರಕ್ಕೆ ಅಭಿವೃದ್ಧಿಗಿಂತ ಬೇಡದ ವಿಚಾರಗಳೇ ಮುಖ್ಯವಾಗಿವೆ. ನಾಥರಾಮ್ ಗೋಡ್ಸೆ ಮಹಾತ್ಮ ಗಾಂಧೀಜಿ ಅವರನ್ನು ಹತ್ಯೆಗೈದ ಸಂದರ್ಭದಲ್ಲಿ ಆರ್‌ಎಸ್‌ಎಸ್ ಅನ್ನು ನಿಷೇಧಿಸಲಾಗಿತ್ತು. ಜವಾಹರಲಾಲ್ ನೆಹರೂ ನಿಷೇಧ ಆದೇಶ ವಾಪಾಸ್ ಪಡೆಯಲಿಲ್ಲವೇ. ನೆಹರೂಗೆ ಅಸಾಧ್ಯವಾದದ್ದು ಸಿದ್ದರಾಮಯ್ಯ-ಪ್ರಿಯಾಂಕ್ ಖರ್ಗೆ ಅವರಿಂದ ಸಾಧ್ಯವೇ ಎಂದು ಪ್ರಶ್ನಿಸಿದರು.

ರಾಜ್ಯದಲ್ಲಿ ನಡೆಯುತ್ತಿರುವುದು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲ. ಅದು ಸಿದ್ದರಾಮಯ್ಯ ಗಣತಿ. ನನಗೆ ನವೆಂಬರ್ ಕ್ರಾಂತಿ ಬಗ್ಗೆ ಏನೂ ಗೊತ್ತಿಲ್ಲವೆಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಪರಮೇಶ್ವರ್ ಮಂತ್ರಿನಾ?

ದೀಪಾವಳಿ ಕೊಡುಗೆ ಹೆಸರಿನಲ್ಲಿ ರಾಜ್ಯ ಸರ್ಕಾರ ಬೆಂಗಳೂರು ಜನರ ಜೇಬಿಗೆ ಕೈ ಹಾಕಿದೆ. ಕಂದಾಯ ಆಸ್ತಿಯನ್ನು ಬಿ ಖಾತಾದಿಂದ ಎ ಖಾತೆಗೆ ಪರಿವರ್ತನೆ ಮಾಡುವ ಅರ್ಜಿಗೆ 500 ರೂ. ಶುಲ್ಕದ ಹೆಸರಿನಲ್ಲಿ ನೂರಾರು ಕೋಟಿ ರೂ. ಕೊಳ್ಳೆ ಹೊಡೆಯಲಾಗುತ್ತಿದೆ. ಇಷ್ಟು ವರ್ಷಗಳಿಂದ ಅದೇ ಆಸ್ತಿ ಅನುಭವಿಸುತ್ತಿರುವ ಜನರಿಗೆ ಖಾತಾ ಪರಿವರ್ತಿಸಿಕೊಡುವುದರ ಉದ್ದೇಶವೇನು. ಲೂಟಿ ಹೊಡೆಯಲು ಇಂತಹ ತಂತ್ರ ಹೆಣೆಯುತ್ತಾರೆ. ಈ ಬಗ್ಗೆ ಸಚಿವ ಜಿ. ಪರಮೇಶ್ವರ್ ಅವರಿಗೆ ಗೊತ್ತಿಲ್ಲವೇ. ಅವರಿಗೆ ಯಾರಾದರೂ ಮಂತ್ರಿ ಅಂತಾರಾ. ಸಣ್ಣ ಮಕ್ಕಳಿಗೆ ಗೊತ್ತಾಗುವ ವಿಚಾರ ಅವರಿಗೆ ತಿಳಿಯುವುದಿಲ್ಲವೆಂದರೆ ನಾನೇನು ಮಾಡಲಿ ಎಂದು ಕಾಲೆಳೆದರು.

ಕೇಂದ್ರ ಸಚಿವರಿಗೆ ಗೌರವ ಸಲ್ಲಿಸದ ಜಿಲ್ಲಾಡಳಿತ | ಮುಖಂಡರ ಅಸಮಾಧಾನ



• ಪ್ರಜೋದಯ ವರದಿ

ಹಾಸನ: ಕೇಂದ್ರ ಸಚಿವ, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಜೆಡಿಎಸ್ ಶಾಸಕರೊಂದಿಗೆ ಶುಕ್ರವಾರ ಹಾಸನಾಂಬ ದೇವಾಲಯಕ್ಕೆ ಆಗಮಿಸಿ ಸಾಮೂಹಿಕವಾಗಿ ದರ್ಶನ ಪಡೆದರು.

ಹಾಸನಾಂಬ ದರ್ಶನಕ್ಕೆ ಬಂದಿದ್ದ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರನ್ನು ಶಿಷ್ಟಾಚಾರ ಪ್ರಕಾರ ಜಿಲ್ಲಾಡಳಿತ ಗೌರವಿಸಲಿಲ್ಲವೆಂಬ ಆರೋಪ ಕೇಳಿ ಬಂದಿದೆ. ಕೇಂದ್ರ ಸಚಿವರನ್ನು ಸೌಜನ್ಯಕ್ಕೂ ಜಿಲ್ಲಾಡಳಿತ ಗೌರವಿಸಲಿಲ್ಲ. ಹಾಸನಾಂಬೆ ದರ್ಶನದ ನಂತರ ಸಾಮಾನ್ಯವಾಗಿ ಗಣ್ಯರನ್ನು ಗೌರವಿಸಲಾಗುತ್ತಿದೆ. ಹಾಗೆಯೇ ಕುಮಾರಸ್ವಾಮಿ ಅವರನ್ನೂ ಗೌರವಿಸುವಂತೆ ಮೈಕ್ ಮೂಲಕ ಕೇಳಿದರೂ, ಜಿಲ್ಲಾಧಿಕಾರಿ ಮತ್ತು ಅಧಿಕಾರಿಗಳು ಯಾರೂ ಬರಲಿಲ್ಲ. ಶ್ರವಣಬೆಳಗೊಳ ಶಾಸಕ ಸಿ.ಎನ್.ಬಾಲಕೃಷ್ಣ ಕರೆದರೂ ಯಾರೊಬ್ಬರೂ ಬರಲಿಲ್ಲ. ಕೊನೆಗೆ ದರ್ಶನದ ಬಗ್ಗೆ ಮಾತನಾಡಿ ಸಚಿವರು ಹೊರಟರು.

ದರ್ಶನನೋತ್ಸವ ಪ್ರಾರಂಭದಲ್ಲಿ ಶಾಸಕರು, ನ್ಯಾಯಾಧೀಶರನ್ನೂ ಸನ್ಮಾನಿಸುತ್ತಿದ್ದ ಜಿಲ್ಲಾಡಳಿತ, ಇತ್ತೀಚೆಗೆ ಸಚಿವರು, ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಗೆ ಮಾತ್ರ ಸನ್ಮಾನವನ್ನು ಸೀಮಿತಗೊಳಿಸಿತ್ತು. ಆದರೆ, ಕೇಂದ್ರ ಸಚಿವರನ್ನು ಸನ್ಮಾನಿಸದಿರುವುದು ಪಕ್ಷದ ಮುಖಂಡರ ಅಸಮಾಧಾನಕ್ಕೂ ಕಾರಣವಾಯಿತು.

ಹೆಚ್.ಡಿ.ಕುಮಾರಸ್ವಾಮಿ ಅವರೊಂದಿಗೆ ಪತ್ನಿ ಅನಿತ ಕುಮಾರಸ್ವಾಮಿ, ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ನಿಖಿಲ್ ಕುಮಾರಸ್ವಾಮಿ ಪತ್ನಿ ಹಾಗು ಜೆಡಿಎಸ್ ಶಾಸಕರ ಜೊತೆ ಶಿಷ್ಟಾಚಾರ ವಾಹನದಲ್ಲೇ ಆಗಮಿಸಿದ ಎಲ್ಲರೂ ದೇವರ ದರ್ಶನ ಪಡೆದು ಗರ್ಭ ಗುಡಿಗೆ ತೆರಳಿ ವಿಶೇಷ ಪೂಜೆ ಸಲ್ಲಿಸಿದರು.

ಈ ವೇಳೆ ಜೆಡಿಎಸ್ ಶಾಸಕರಾದ ಸುರೇಶ್ ಬಾಬು, ಎಂ.ಟಿ.ಕೃಷ್ಣಪ್ಪ, ಹೆಚ್.ಪಿ.ಸ್ವರೂಪ್, ಶರಣ್ ಪ್ರಕಾಶ್ ಕಂದಕೂರ್, ಕರೆಮ್ಮ ನಾಯಕ್, ಜಿ.ಡಿ.ಹರೀಶ್ ಗೌಡ, ಶಾರದಾ ಪೂರ್ಯ ನಾಯಕ್ ಮತ್ತಿತರರಿದ್ದರು.

ಡಿ.ಕೆ.ಶಿ. ಅರ್ಹತೆ ಗಿಟ್ಟಿಸಲು ಒಂದೇ ಮೆಟ್ಟಿಲು ಬಾಕಿ

• ಪ್ರಜೋದಯ ವರದಿ

ಹಾಸನ: ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಅಂದುಕೊಂಡಿದ್ದನ್ನು ಸಾಧಿಸಲು ಒಂದು ಮೆಟ್ಟಿಲು ಮಾತ್ರ ಬಾಕಿ ಇದ್ದು, ಅಲ್ಲಿ ಅರ್ಹರಾಗಲು ಹೇಗೆ ಕೆಲಸ ಮಾಡುತ್ತಾರೆಂಬುದು ಮುಖ್ಯವೆಂದು ರಾಜಗುರು ದ್ವಾರಕಾನಾಥ್ ಅವರು ಪ್ರತಿಕ್ರಿಯಿಸಿದರು.

ಶುಕ್ರವಾರ ಹಾಸನಾಂಬ ದರ್ಶನದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇವಿ ದರ್ಶನ ವೇಳೆ ಡಿ.ಕೆ.ಶಿವಕುಮಾರ್ ನಾರಾಯಣಿ ಮಂತ್ರ ಪಠಿಸಿದ್ದಾರೆ. ನಾರಾಯಣಿ ಎಂದರೆ ಮಾತೃ ಸ್ವರೂಪಿ ಎಂದರ್ಥ. ಬ್ರಹ್ಮ, ವಿಷ್ಣು, ಮಹೇಶ್ವರರು ಇಲ್ಲದೇ ಯಾವ ಕೆಲಸವೂ ಆಗುವುದಿಲ್ಲ. ಗರ್ಭಗುಡಿಯಲ್ಲಿ ಪ್ರಸಾದ ಆಗಿದೆ ಎಂದರೆ ಮುಂದೆ ಒಳ್ಳೆಯ ಕಾಲ ಬರುತ್ತದೆಂದು ಗ್ರಹಿಸಬಹುದು. ಮುಂದೆ ಆಗುವ ಸೂಚನೆಯನ್ನು ದೇವಿ ನಾನಾ ರೂಪದಲ್ಲಿ ತೋರಿಸುತ್ತಾಳೆ. ಅವರ ಕೋರಿಕೆಯನ್ನು ದೇವಿ ನೆರವೇರಿಸುತ್ತಾಳೆಂದರು.

ಮನುಷ್ಯರನ್ನು ನಂಬಿ ಕೆಟ್ಟವರಿದ್ದಾರೆ ಹೊರತು ದೇವರನ್ನು ನಂಬಿದವರು ಯಾರೂ ಕೆಟ್ಟಿಲ್ಲ. ಈಗಿರುವ ಅವಕಾಶವನ್ನು ಒಳ್ಳೆಯ ರೀತಿಯಲ್ಲಿ ಬಳಸಿಕೊಂಡು ಸರ್ಕಾರಕ್ಕೆ ಒಳ್ಳೆಯ ಹೆಸರು ತರಬೇಕು. ಸರ್ಕಾರಕ್ಕೆ ಅಂಟಿರುವ ಕೆಟ್ಟ ಹೆಸರನ್ನು ನಿವಾರಿಸಬೇಕು. ಜನರಿಗೆ ಕೊಟ್ಟ ಭರವಸೆ ಈಡೇರಿಸಬೇಕು. ಕಳೆದ ಎರಡೂ ವರ್ಷಗಳಿಂದ ರಾಜ್ಯದಲ್ಲಿ ಜನರ ಮನಮುಟ್ಟುವಂತಹ ಅಭಿವೃದ್ಧಿ ಕೆಲಸಗಳಾಗಿಲ್ಲ. ಇನ್ನೂ ಎರಡೂವರೆ ವರ್ಷ ಸಮಯವಿದ್ದು, ಶಿವಕುಮಾರ್ ಅವರು ಅದರ ಕಡೆಗೆ ಗಮನ ಹರಿಸಬೇಕೆಂದು ಮುಖ್ಯಮಂತ್ರಿ ಬದಲಾವಣೆ ವಿಚಾರವಾಗಿ ಪ್ರತಿಕ್ರಿಯಿಸಿದರು.

ಪುಣ್ಯ ಏಕಾದಶಿ ದಿನದಿಂದ ದೇವರಲ್ಲಿ ಪ್ರಾರ್ಥಿಸಿದರೆ ಅಂದುಕೊಂಡದ್ದು ನೆರವೇರುತ್ತದೆ. ಹಾಸನಾಂಬ ಕ್ಷೇತ್ರ ಪ್ರಪಂಚದಲ್ಲೇ ದೊಡ್ಡ ಸ್ಥಾನವಾಗಲಿ. ಸಕಲವೂ ಒಳಿತಾಗಬೇಕೆಂದರೆ ಪುರೋಹಿತರು ಸಕಾಲಕ್ಕೆ ಪೂಜೆ ಮಾಡಬೇಕು. ದೇವಸ್ಥಾನದ ಒಳಗೆ ಭಕ್ತರನ್ನು ಉಪಚರಿಸುವ ರೀತಿ ಸರಿಯಾಗಿಲ್ಲ. ಹಾಸನಾಂಬ ಮೂರ್ತಿ ನೋಡುವ ಮೊದಲೇ ಅಲ್ಲಿನ ಸಿಬ್ಬಂದಿ ತಳ್ಳಿಬಿಡುತ್ತಾರೆ. ಭಕ್ತರು ದು:ಖಪಟ್ಟರೆ ಅದನ್ನು ರಾಜ್ಯ ಆಳವವರು ಅನುಭವಿಸಬೇಕಾಗುತ್ತದೆ. ಅರ್ಧ ನಿಮಿಷದಲ್ಲಿ ಏನು ಆಗುವುದಿಲ್ಲ ದೇವಿಯನ್ನು ಕಣ್ತುಂಬ ನೋಡಲು ಅವಕಾಶ ಮಾಡಿಕೊಡಬೇಕು. ನಿಮ್ಮ ಕೈಯಲ್ಲಿ ಎಳೆಸಿಕೊಳ್ಳಲು ಇಲ್ಲಿಯವರೆಗೂ ಬರಬೇಕಾ. ಸುಗಮ ದರ್ಶನಕ್ಕೆ ಅವಕಾಶ ಮಾಡಬೇಕೆಂದು ಜಿಲ್ಲಾಡಳಿತಕ್ಕೆ ಮನವಿ ಮಾಡಿದರು.

ಪರಿಸ್ಥಿತಿ ಅವಲೋಕಿಸಿದ ಕೃಷ್ಣಬೈರೇಗೌಡ

• ಪ್ರಜೋದಯ ವರದಿ

ಹಾಸನ: ಹಾಸನಾಂಬ ದರ್ಶನಕ್ಕೆ ಶುಕ್ರವಾರ ಭಾರೀ ಸಂಖ್ಯೆಯಲ್ಲಿ ಭಕ್ತರು ಆಗಮಿಸಿದ ಹಿನ್ನಲೆ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ರಾತ್ರಿ ದೇವಸ್ಥಾನಕ್ಕೆ ಆಗಮಿಸಿ ಪರಿಸ್ಥಿತಿ ಅವಲೋಕಿಸಿದರು.

ಭಕ್ತರ ಸರದಿ ಸಾಲುಗಳು ಹಾಗು ವಾರ್‌ರೂಂ ಪರಿಶೀಲನೆ ನಡೆಸಿದ ಅವರು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ, ಉಪವಿಭಾಗಾಧಿಕಾರಿ ಮಾರುತಿ ಅವರಿಂದ ಮಾಹಿತಿ ಪಡೆದುಕೊಂಡರು. ಈ ವೇಳೆ ಮಾತನಾಡಿದ ಅವರು, ಲಕ್ಷಾಂತರ ಸಂಖ್ಯೆಯಲ್ಲಿ ಭಕ್ತರು ಆಗಮಿಸುತ್ತಿರುವುದರಿಂದ ಎಲ್ಲರಿಗೂ ದರ್ಶನ ಮಾಡಿಸಬೇಕಿರುವುದರಿಂದ ಎಲ್ಲರೂ ಸಹಕಾರ ನೀಡಬೇಕೆಂದು ಕೋರಿದರು.

ಸರ್ಕಾರಕ್ಕೆ ಹಾಸನಾಂಬ ಸದ್ಬುದ್ಧಿ ನೀಡಲಿ: ಹೆಚ್.ಡಿ.ಕೆ.

• ಪ್ರಜೋದಯ ವರದಿ

ಹಾಸನ: ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಸೇರಿ ಸರ್ಕಾರ ಹಲವು ಸಚಿವರು ದೇವಿ ದರ್ಶನ ಮಾಡಿದ್ದಾರೆ. ಆದರೆ, ನಾಡಿನ ಜನರ ಬಗ್ಗೆ ಅವರ ಮಾತುಗಳಲ್ಲಿ ಬದ್ಧತೆ ಇರಲಿ. ಅವರು ಹೇಳಿದ ಘೋಷಣೆಗಳು ಕೃತಿಯಾಗಿ ಜಾರಿಯಾಗಲಿ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಹೇಳಿದರು.

ಹಾಸನಾಂಬ ದರ್ಶನ ಪಡೆದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜನರ ಪರವಾಗಿ, ಪ್ರಾಮಾಣಿಕವಾಗಿ ಆಡಳಿತ ನಡೆಸಲು ಹಾಸನಾಂಬೆ ಸದ್ಬುದ್ಧಿ ನೀಡಲಿ. ವಿಶೇಷವಾಗಿ ರೈತರಿಗೆ ನೆರವು ನೀಡು ವಂತಾಗಬೇಕು. ಈ ಬಾರಿ ಉತ್ತಮ ಮಳೆಯಾಗಿದೆ. ಆದರೆ, ಉತ್ತರ ಕರ್ನಾಟಕ ಭಾಗದಲ್ಲಿ ಅತಿವೃಷ್ಟಿಯಿಂದ ರೈತರು ಸಂಕಷ್ಟ ಅನುಭವಿಸುತ್ತಿದ್ದಾರೆ. ಬೆಳೆ ನಷ್ಟದಿಂದ ಆತ್ಮಹತ್ಯೆ ಮಾಡುವ ಪರಿಸ್ಥಿತಿ ಬರಬಾರದು. ಸರ್ಕಾರದ ಹೇಳಿಕೆಗಳು ಕೇವಲ ಘೋಷಣೆಗಳಾಗಿ ಉಳಿಯದೆ, ರೈತರಿಗೆ ನೈಜ ಪರಿಹಾರ ನೀಡಬೇಕೆಂದರು.

ನಾಡಿನ ಜನತೆಗೆ ದೇವಿಯ ಕೃಪೆ ಇರಲಿ ಎಂದು ಪ್ರಾರ್ಥಿಸಿದ್ದೇನೆ. ಈ ಬಾರಿ ಜಿಲ್ಲಾಡಳಿತ ಶಿಸ್ತುಬದ್ಧವಾಗಿ ದರ್ಶನ ವ್ಯವಸ್ಥೆ ಮಾಡಿದೆ. ಭಕ್ತರಿಗೆ ತೊಂದರೆ ಆಗದಂತೆ ಆಡಳಿತ ವರ್ಗ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವ ಮೂಲಕ ಉತ್ತಮ ವ್ಯವಸ್ಥೆ ಕಲ್ಪಿಸಿರುವುದು ಶ್ಲಾಘನೀಯ ಎಂದು ಪ್ರಶಂಸಿಸಿದರು.

ರೆಸಾರ್ಟ್‌ನಲ್ಲಿ ಶಾಸಕರೊಂದಿಗೆ ಸಭೆ

ಅನಾರೋಗ್ಯದಿಂದ ಚೇತರಿಸಿ ಕೊಂಡಿರುವ ಹೆಚ್.ಡಿ.ಕುಮಾರಸ್ವಾಮಿ ಅವರು ಪಕ್ಷ ಸಂಘಟನೆಗೆ ಒತ್ತು ನೀಡಿದ್ದಾರೆ. ಗುರುವಾರ ಮಂಡ್ಯ ಜಿಲ್ಲೆ ಪ್ರವಾಸ ಮುಗಿಸಿ, ಜೆಡಿಎಸ್ ಶಾಸಕರು, ಮುಖಂಡರೊಂದಿಗೆ ಪಕ್ಷದ ಕೋರ್ ಕಮಿಟಿ ಸಭೆ ನಡೆಸಿರುವ ಅವರು, ಶುಕ್ರವಾರ ಪಕ್ಷದ ಶಾಸಕರೊಂದಿಗೆ ಆಲೂರು ಸಮೀಪದ ಖಾಸ

ಯಾವ ಹಾಲು ಉತ್ತಮ?

ಪ್ರತಿನಿತ್ಯ ಹಾಲು ಕುಡಿಯುವ ಅಭ್ಯಾಸ ಎಲ್ಲಾ ವಯಸ್ಸಿನವರಿಗೂ ಒಳ್ಳೆಯದು. ಅದಕ್ಕಾಗಿಯೇ ವೈದ್ಯರು ಹಾಲು ಸಂಪೂರ್ಣ ಆರೋಗ್ಯಕ್ಕೆ ಅತ್ಯಗತ್ಯ ಎಂದು ಪದೇ ಪದೇ ಹೇಳುತ್ತಾರೆ. ಮಾತ್ರವಲ್ಲ ಪ್ರತಿದಿನ ಒಂದು ಲೋಟ ಹಾಲು ಕುಡಿಯಲು ಶಿಫಾರಸು ಮಾಡುತ್ತಾರೆ. ಹಾಲಿನಲ್ಲಿ ವಿಟಮಿನ್‌ಗಳು, ಪ್ರೋಟೀನ್‌ಗಳು ಮತ್ತು ಕ್ಯಾಲ್ಸಿಯಂನಂತಹ ಪೋಷಕಾಂಶಗಳು ಸಮೃದ್ಧವಾಗಿರುವುದರಿಂದ ಒಂದೇ ಒಂದು ಪಾನೀಯದಲ್ಲಿ ಎಲ್ಲಾ ರೀತಿಯ ಅಂಶಗಳು ಇರುವುದರಿಂದ ಬೆಳೆಯುತ್ತಿರುವ ಮಕ್ಕಳು ಹಾಲು ಕುಡಿಯಬೇಕು ಎಂದು ಹೇಳಲಾಗುತ್ತದೆ. ಹಾಲು ಮಕ್ಕಳ ಮೂಳೆಗಳನ್ನು ಆರೋಗ್ಯಕರವಾಗಿಡಲು ಸಹಾಯ ಮಾಡುತ್ತದೆ. ಹಾಲಿನಲ್ಲಿ ವಿಟಮಿನ್ ಡಿ ಇದೆ. ಇದು ದೇಹಕ್ಕೆ ಬಹಳ ಅವಶ್ಯಕವಾಗಿದೆ. ಆದರೆ ಅನೇಕರಿಗೆ ಹಾಲನ್ನು ತಣ್ಣಗಿರುವಾಗ ಕುಡಿಯಬೇಕೋ ಅಥವಾ ಅದನ್ನು ಬಿಸಿ ಇರುವಾಗಲೇ ಸೇವನೆ ಮಾಡಬೇಕೋ ಎಂಬ ಬಗ್ಗೆ ಅನುಮಾನ ಇರುತ್ತದೆ. ಅದರಲ್ಲಿಯೂ ಹಾಲನ್ನು ಬಿಸಿಯಾಗಿ ಅಥವಾ ತಣ್ಣಗೆ ಕುಡಿಯುವುದರಿಂದ ವಿಭಿನ್ನ ಪ್ರಯೋಜನಗಳೇವೆ ಎಂದು ತಜ್ಞರು ಹೇಳುತ್ತಾರೆ. ಹಾಗಾದರೆ ನಮ್ಮ ದೇಹಕ್ಕೆ ಯಾವುದು ಒಳ್ಳೆಯದು? ಹೇಗೆ ಸೇವನೆ ಮಾಡಿದರೆ ಹೆಚ್ಚು ಪ್ರಯೋಜನ ಸಿಗುತ್ತದೆ ಎಂಬುದನ್ನು ತಿಳಿದುಕೊಳ್ಳಿ.

ತಣ್ಣಗಿರುವ ಹಾಲು ಯಾರಿಗೆ ಒಳ್ಳೆಯದು? : ತಜ್ಞರು ಹೇಳುವ ಪ್ರಕಾರ ಹಾಲು ಬಿಸಿಯಾಗಿ ಅಥವಾ ತಣ್ಣಗೆ ಕುಡಿಯುವುದರಿಂದ ವಿಭಿನ್ನ ರೀತಿಯ ಪ್ರಯೋಜನಗಳು ಸಿಗುತ್ತವೆ. ನಮಗೆ ಯಾವುದು ಅನುಕೂಲವೋ ಆ ರೀತಿ ಸೇವನೆ ಮಾಡಬಹುದು. ಅಂದರೆ ಕೆಲವರಿಗೆ ಕೆಲವು ರೀತಿಯ ಸಮಸ್ಯೆಗಳಿರುತ್ತವೆ, ಅಂತಹ ಸಮಯದಲ್ಲಿ ಯಾವುದು ದೇಹಕ್ಕೆ ಒಳ್ಳೆಯದೋ ಆ ರೀತಿಯಾಗಿ ಹಾಲನ್ನು ಕುಡಿಯಬೇಕಾಗುತ್ತದೆ. ಹೃದಯ ಸಂಬಂಧಿ ಸಮಸ್ಯೆಗಳಿರುವವರು ತಣ್ಣನೆಯ ಹಾಲು ಕುಡಿಯಬೇಕು ಎಂದು ತಜ್ಞರು ಹೇಳುತ್ತಾರೆ. ತಣ್ಣಗಿರುವ ಹಾಲು ದೇಹದಲ್ಲಿ ಚಯಾಪಚಯ ಕ್ರಿಯೆಯನ್ನು ಹೆಚ್ಚಿಸುತ್ತದೆ, ಇದು ತೂಕ ಇಳಿಸಿಕೊಳ್ಳಲು ಸಹಾಯ ಮಾಡುತ್ತದೆ. ಮಾತ್ರವಲ್ಲ ನಮ್ಮ ಸ್ನಾಯುಗಳಿಗೂ ಬಹಳ ಪ್ರಯೋಜನಕಾರಿ ಎಂದು ಹೇಳಲಾಗುತ್ತದೆ. ಹಾಗಾಗಿಯೇ ವ್ಯಾಯಾಮ ಮಾಡಿ ಬಂದ ನಂತರ ತಣ್ಣನೆಯ ಹಾಲು ಕುಡಿಯಿರಿ ಎಂದು ವೈದ್ಯರು ಸಲಹೆ ನೀಡುತ್ತಾರೆ. ಇನ್ನು ಮೂಳೆಗಳ ಆರೋಗ್ಯವನ್ನು ಸುಧಾರಿಸುವುದಕ್ಕೂ ಕೂಡ ತಣ್ಣನೆಯ ಹಾಲು ಕುಡಿಯುವುದು ಒಳ್ಳೆಯದು ಎಂದು ತಜ್ಞರು ಶಿಫಾರಸು ಮಾಡುತ್ತಾರೆ, ಇದು ಮೂಳೆಗಳನ್ನು ಬಲಪಡಿಸುವ ಶಕ್ತಿ ಹೊಂದಿದೆ.

ಬಿಸಿಯಾಗಿರುವ ಹಾಲು ಯಾರಿಗೆ ಒಳ್ಳೆಯದು? : ಮಲಗುವ ಮುನ್ನ ಬೆಚ್ಚಗಿನ ಹಾಲು ಕುಡಿಯುವುದು ತುಂಬಾ ಒಳ್ಳೆಯದು, ಏಕೆಂದರೆ ಇದು ನಿದ್ರೆ ಚೆನ್ನಾಗಿ ಬರುವುದಕ್ಕೆ ಸಹಾಯ ಮಾಡುತ್ತದೆ ಎಂದು ವೈದ್ಯರು ಹೇಳುತ್ತಾರೆ. ಮಾತ್ರವಲ್ಲ ಬೆಚ್ಚಗಿನ ಹಾಲು ತಣ್ಣನೆಯ ಹಾಲಿಗಿಂತ ವೇಗವಾಗಿ ಜೀರ್ಣವಾಗುತ್ತದೆ. ಆದ್ದರಿಂದ ಜೀರ್ಣಕ್ರಿಯೆಯ ಸಮಸ್ಯೆಗಳಿರುವವರು ಬೆಚ್ಚಗಿನ ಹಾಲು ಕುಡಿಯಲು ಸಲಹೆ ನೀಡಲಾಗುತ್ತದೆ. ಜೊತೆಗೆ ಬಿಸಿ ಬಿಸಿಯಾಗಿರುವ ಹಾಲು ದೇಹವನ್ನು. ಉಲ್ಲಾಸದಿಂದ ಕೂಡಿರುವಂತೆ ಮಾಡುತ್ತದೆ, ಅದಕ್ಕಾಗಿಯೇ ವೈದ್ಯರು ಪ್ರತಿದಿನ ಹಾಲು ಕುಡಿಯಲು ಶಿಫಾರಸು ಮಾಡುತ್ತಾರೆ. ಬೆಚ್ಚಗಿನ ಹಾಲು ಹೃದಯದ ಆರೋಗ್ಯಕ್ಕೂ ಕೂಡ ಒಳ್ಳೆಯದು.

18-10-2025 ದಿನ ಭವಿಷ್ಯ

ಮೇಷ: ನಿಮ್ಮ ಅಪಾರ ವಿಶ್ವಾಸ ಮತ್ತು ಸುಲಭದ ಕೆಲಸದ ವೇಳಾಪಟ್ಟಿ ಇಂದು ವಿಶ್ರಾಂತಿಗೆ ಸಾಕಷ್ಟು ಸಮಯ ನೀಡುತ್ತದೆ. ಮನೆಯ ಅಗತ್ಯಗಳನ್ನು ನೋಡುತ್ತಾ, ಇಂದು ನೀವು ನಿಮ್ಮ ಜೀವನ ಸಂಗಾತಿಯೊಂದಿಗೆ ಯಾವುದೇ ಅಮೂಲ್ಯ ವಸ್ತುವನ್ನು ಖರೀದಿಸಬಹುದು, ಇದರಿಂದ ಆರ್ಥಿಕ ಪರಿಸ್ಥಿತಿ ಸ್ವಲ್ಪ ತೊಂದರೆಗೊಳಗಾಗಬಹುದು.

ವೃಷಭ: ನಿಮ್ಮ ಅಪಾರ ವಿಶ್ವಾಸ ಮತ್ತು ಸುಲಭದ ಕೆಲಸದ ವೇಳಾಪಟ್ಟಿ ಇಂದು ವಿಶ್ರಾಂತಿಗೆ ಸಾಕಷ್ಟು ಸಮಯ ನೀಡುತ್ತದೆ. ನೀವು ತ್ವರಿತ ಹಣ ಪಡೆಯುವ ಬಯಕೆ ಹೊಂದಿರುತ್ತೀರಿ. ನಿಮ್ಮ ಕೋಪವನ್ನು ನಿಯಂತ್ರಿಸಿ ಹಾಗೂ ಕುಟುಂಬದ ಸದಸ್ಯರ ಮನ ನೋಯಿಸುವುದನ್ನು ತಪ್ಪಿಸಿ.

ಮಿಥುನ: ಕೆಲಸ ಮತ್ತು ಮನೆಯಲ್ಲಿನ ಕೆಲವು ಒತ್ತಡ ನಿಮ್ಮ ಸಹನೆಯನ್ನು ಪರೀಕ್ಷಿಸುತ್ತದೆ. ಯಾವುದೇ ಸಮಯದಲ್ಲಿ ಹಣದ ಅಗತ್ಯವಿರುತ್ತದೆ ಆದ್ದರಿಂದ ಇಂದು ಸಾಧ್ಯವಾದಷ್ಟು ನಿಮ್ಮ ಹಣವನ್ನು ಸಂಗ್ರಹಿಸುವ ಬಗ್ಗೆ ಆಲೋಚಿಸಿ. ಒಟ್ಟಾರೆ ಒಂದು ಲಾಭದಾಯಕ ದಿನವಾದರೂ ನೀವು ನಿರಾಸೆ ಭರವಸೆಯಿಡ ಬಹುದಾದ ಯಾರಾದರೂ ನಿಮ್ಮನ್ನು ನಿರಾಸೆಗೊಳಿಸುತ್ತಾರೆ.

ಕರ್ಕಾಟಕ: ನಿಮ್ಮ ಮನಸ್ಥಿತಿಯನ್ನು ಬದಲಾಯಿಸಲು ಯಾವುದಾದರೂ ಸಾಮಾಜಿಕ ಸಭೆಗೆ ಹಾಜರಾಗಿ. ತಮ್ಮ ಹಣವನ್ನು ಇನ್ನೊಬ್ಬರಿಗೆ ನೀಡಲು ಇಷ್ಟಪಡುವುದಿಲ್ಲ ಆದರೆ ಇಂದು ನೀವು ಅಗತ್ಯವಿರುವವರಿಗೆ ಹಣವನ್ನು ಕೊಟ್ಟು ವಿಶ್ರಾಂತಿಯನ್ನು ಅನುಭವಿಸುವಿರಿ. ಸಮುದ್ರದಾಚೆಯ ಸಂಬಂಧಿಯಿಂದ ಒಂದು ಉಡುಗೊರೆ ನಿಮ್ಮನ್ನು ಸಂತೋಷಪಡಿಸುತ್ತದೆ.

ಸಿಂಹ: ಅತ್ಯಂತ ಪ್ರಭಾವಿ ಜನರ ಬೆಂಬಲ ನಿಮ್ಮ ನೈತಿಕ ಸ್ಥೈರ್ಯವನ್ನು ಹೆಚ್ಚಿಸುತ್ತದೆ. ನಿಮ್ಮ ಅವಾಸ್ತವಿಕ ಯೋಜನೆ ಹಣದ ಕೊರತೆಗೆ ಕಾರಣವಾಗುತ್ತದೆ. ಸ್ನೇಹಿತರು ಹಾಗೂ ಕುಟುಂಬದ ಸದಸ್ಯರೊಡನೆ ಒಂದು ಸಂಜೆಯನ್ನು ಆಯೋಜಿಸಿ. ನಿಮ್ಮ ಪ್ರೀತಿಪಾತ್ರರು ನಿಮ್ಮ ಮಾತುಗಳನ್ನು ಅರ್ಥಮಾಡಿಕೊಳ್ಳುತ್ತಿಲ್ಲ ಎಂದು ಭಾವಿಸಿದರೆ, ಇಂದು ನೀವು ಅವರೊಂದಿಗೆ ಸಮಯವನ್ನು ಕಳೆಯಿರಿ.

ಕನ್ಯಾ: ನಿಮ್ಮ ಶೀಘ್ರ ಕ್ರಮ ನಿಮ್ಮನ್ನು ಪ್ರೇರೇಪಿಸುತ್ತದೆ. ಯಶಸ್ಸು ಸಾಧಿಸಲು-ಸಮಯದ ಜೊತೆ ನಿಮ್ಮ ಆಲೋಚನೆಗಳನ್ನು ಬದಲಾಯಿಸಿಕೊಳ್ಳಿ-ಇದು ನಿಮ್ಮ ದೃಷ್ಟಿಯನ್ನು ವಿಸ್ತಾರಗೊಳಿಸುತ್ತದೆ ನಿಮ್ಮ ವ್ಯಕ್ತಿತ್ವವನ್ನು ವೃದ್ಧಿಸುತ್ತದೆ- ನಿಮ್ಮ ವ್ಯಕ್ತಿತ್ವವನ್ನು ಸುಧಾರಿಸುತ್ತದೆ ಮತ್ತು ನಿಮ್ಮ ಮನಸ್ಸನ್ನು ಪಕ್ವಗೊಳಿಸುತ್ತದೆ.

ತುಲಾ: ಹೊರಾಂಗಣ ಕ್ರೀಡೆ ನಿಮ್ಮನ್ನು ಸೆಳೆಯುತ್ತದೆ-ಧ್ಯಾನ ಮತ್ತು ಯೋಗ ಲಾಭ ತರುತ್ತವೆ. ಇಂದು ಹಣಕಾಸಿನ ಭಾಗವು ಉತ್ತಮವಾಗಿರುತ್ತದೆ ಆದರೆ ಇದರೊಂದಿಗೆ ನೀವು ನಿಮ್ಮ ಹಣವನ್ನು ವ್ಯರ್ಥವಾಗಿ ಖರ್ಚು ಮಾಡದಂತೆ ನೋಡಿಕೊಳ್ಳಬೇಕು. ನಿಮ್ಮ ಹಾಸ್ಯದ ಪ್ರಕೃತಿ, ಸುತ್ತಮುತ್ತಲಿನ ಪರಿಸರವನ್ನು ಬೆಳಗಿಸುತ್ತದೆ.

ವೃಶ್ಚಿಕ: ನಿಮ್ಮ ಆಸಕ್ತಿಗಳನ್ನು ಮುಂದುವರಿಸಲು ಅಥವಾ ನೀವು ತುಂಬ ಆನಂದಿಸುವ ಕೆಲಸಗಳನ್ನು ಮಾಡಲು ಹೆಚ್ಚು ಸಮಯ ಕಳೆಯಬೇಕು. ಸಣ್ಣ ಉದ್ಯೋಗವನ್ನು ಮಾಡುವ ಜನರು, ಇಂದು ತಮ್ಮ ಆಪ್ತರಿಂದ ಯಾವುದೇ ಸಲಹೆಯನ್ನು ಪಡೆಯಬಹುದು. ಇದರಿಂದ ಅವರಿಗೆ ಆರ್ಥಿಕವಾಗಿ ಲಾಭ ಪಡೆಯುವ ಸಾಧ್ಯತೆ ಇದೆ. ನಿಮ್ಮ ಪ್ರೀತಿ ಒಂದು ಹೊಸ ಎತ್ತರವನ್ನು ತಲುಪುತ್ತದೆ.

ಧನು: ಹೆದರಿಕೆ ನಿಮ್ಮ ಸಂತೋಷವನ್ನು ಹಾಳುಗೆಡವಬಹುದು. ನೀವು ಇದು ನಮ್ಮ ಆಲೋಚನೆಗಳು ಮತ್ತು ಕಲ್ಪನೆಯ ಪ್ರಭಾವವೆಂದು ಅರ್ಥಮಾಡಿಕೊಳ್ಳಬೇಕು. ನಿಮ್ಮ ಸೃಜನಶೀಲ ಪ್ರತಿಭೆಯನ್ನು ಸರಿಯಾಗಿ ಬಳಸಿದಲ್ಲಿ ಅದು ಅತ್ಯಂತ ಲಾಭದಾಯಕವೆಂದು ಸಾಬೀತಾಗಬಹುದು. ನಿಮ್ಮ ಹೊಗಳಿಕೆಯಲ್ಲಿ ಉದಾರ ಮತ್ತು ಪ್ರಾಮಾಣಿಕವಾಗಿರಿ.

ಮಕರ: ನಗು ನಿಮ್ಮ ಎಲ್ಲ ಸಮಸ್ಯೆಗಳಿಗೆ ಪರಿಹಾರವಾದ್ದರಿಂದ ನಕ್ಕುಬಿಡಿ. ನಿಮ್ಮ ಮನೆಗೆ ಸಂಬಂಧಿಸಿದ ಹೂಡಿಕೆ ಲಾಭದಾಯಕವಾಗಿರುತ್ತದೆ. ನಿಮ್ಮ ಕುಟುಂಬ ಸದಸ್ಯರೆಡೆಗೆ ನಿಮ್ಮ ಸರ್ವಾಧಿಕಾರಿ ಧೋರಣೆ ಕೇವಲ ಅನುಪಯುಕ್ತ ವಾದಗಳನ್ನು ಪ್ರಾರಂಭಿಸುತ್ತದೆ ಮತ್ತು ಇದು ಟೀಕೆಯನ್ನೂ ತರಬಹುದು. ಕೆಲವರಿಗೆ ಹೊಸ ಪ್ರಣಯ ನಿಮ್ಮ ಚೈತನ್ಯವನ್ನು ಪ್ರೇರೇಪಿಸಬಹುದು.

ಕುಂಭ: ನಿಮ್ಮ ಭಾವನೆಗಳನ್ನು ನಿಯಂತ್ರಿಸಲು ನಿಮಗೆ ಕಷ್ಟವಾಗಬಹುದು - ನಿಮ್ಮ ಅಸಾಮಾನ್ಯ ವರ್ತನೆ ನಿಮ್ಮ ಸುತ್ತಲಿನ ಜನರನ್ನು ಗೊಂದಲದಲ್ಲಿ ಕೆಡವಬಹುದು ಮತ್ತು ನಿಮ್ಮನ್ನು ನಿರಾಸೆಗೊಳಿಸಬಹುದು. ನಿಮ್ಮ ಅವಾಸ್ತವಿಕ ಯೋಜನೆ ಹಣದ ಕೊರತೆಗೆ ಕಾರಣವಾಗುತ್ತದೆ. ನಿಮಗೆ ಗೊತ್ತಿದ್ದ ಯಾರಾದರೂ ಹಣಕಾಸಿಗೆ ಸಂಬಂಧಿಸಿದ ವಿಷಯಗಳಿಗೆ ಅತಿಯಾಗಿ ಪ್ರತಿಕ್ರಿಯಿಸಬಹುದು.

ಮೀನ: ನಿಮ್ಮ ಸ್ನೇಹಿತರು ಅಥವಾ ಕುಟುಂಬ ಸದಸ್ಯರೊಂದಿಗಿನ ಸಂತಸದ ಪ್ರಯಾಣ ನಿಮಗೆ ಸಮಾಧಾನ ನೀಡುತ್ತದೆ. ವ್ಯಾಪಾರದಲ್ಲಿ ಪ್ರಯೋಜನ ಇಂದು ಅನೇಕ ವ್ಯಾಪಾರಿಗಳ ಮುಖದ ಮೇಲೆ ಸಂತೋಷವನ್ನು ತರಬಹುದು. ನಿಮಗೆ ಹತ್ತಿರವಿರುವ ಯಾರಾದರೂ ಅತ್ಯಂತ ಆನಿರೀಕ್ಷಿತ ಮನಸ್ಥಿತಿಯಲ್ಲಿರುತ್ತಾರೆ. ನೀವು ಮತ್ತು ನಿಮ್ಮ ಸಂಗಾತಿಯ ನಡುವಿನ ಪ್ರೀತಿ ಸವೆಯಬಹುದು.

ಜನಪದರ ಆಚಾರ ನಂಬಿಕೆಗಳ

ಅಧ್ಯಯನ ಹಾಸನ ಸೀಮೆಯ ಐತಿಹ್ಯಗಳು

ಜಾನಪದವು ವಿಶಾಲವೂ ಮತ್ತು ವ್ಯಾಪಕವೂ ಆಗಿದ್ದು ಜಗತ್ತನ್ನೆಲ್ಲ ತನ್ನಲ್ಲಿ ಹುದುಗಿಸಿಕೊಂಡಿದೆ. ಇಲ್ಲಿ ಪ್ರಾಚೀನ ಅರ್ವಾಚೀನಗಳೆರಡೂ ಸಂಧಿಸಿ ಪರಸ್ಪರ ಕೈಕುಲುಕುತ್ತವೆ. ಈ ಜಾನಪದಕ್ಕೆ ಆದಿ ಅಂತ್ಯಗಳಿಲ್ಲ ಸಾವಿಲ್ಲ. ಆಧುನಿಕ ಮಾನವನಲ್ಲಿ ಗುಪ್ತಗಾಮಿನಿಯಾಗಿ ಪ್ರವಹಿಸುತ್ತಾ ಬೀಜದಲ್ಲಿ ವೃಕ್ಷವಡಗಿರುವಂತೆ ಕಲೆ, ವಿಜ್ಞಾನ ಹಾಗೂ ತಂತ್ರಜ್ಞಾನದಲ್ಲಿ ಜಾನಪದ ಚೈತನ್ಯ ಸುಪ್ತವಾಗಿರುತ್ತದೆ...

ತಾಯಿ ತೊಟ್ಟಿಲು ತೂಗುತ್ತಾ, ಗರತಿಯರು ರಾಗಿ ಬೀಸುತ್ತಾ, ರಸಿಕ ಗಾಡಿ ಹೊಡೆಯುತ್ತಾ, ಗಂಡು ಹೆಣ್ಣುಗಳು ನಾಟಿ ಹಾಕುತ್ತಾ, ಸ್ತ್ರೀಯರು ರಾಟೆ ತಿರುಗಿಸುತ್ತಾ, ಮಕ್ಕಳು ಕುಣಿಯುತ್ತಾ ಹಾಡುವುದೆಲ್ಲಾ ಜನಪದ ಗೀತೆಯಾಗುತ್ತದೆ. ಸಾಮಾನ್ಯ ಜನ ಚಳಿಗಾಲದಲ್ಲಿ ಬೆಂಕಿ ಕಾಯಿಸುತ್ತಾ ಕುಳಿತು, ಬೇಸಿಗೆಯ ಬೆಳದಿಂಗಳಲ್ಲಿ ಬೀದಿ ಪಡಸಾಲೆಗಳ ಮೇಲೆ ನೆರೆದು ಹಬ್ಬ ಹರಿದಿನ ಮದುವೆಗಳಲ್ಲಿ ಒಂದೆಡೆ ಕಲೆತು, ಕುಳಿತು ಹರಟೆ ಹೊಡೆಯುವಾಗ, ಉತ್ಸಾಹದ ಭರದಲ್ಲಿ ಕುಣಿಯುವಾಗ ಕತೆಗಳ ಲಹರಿ ಉಕ್ಕುತ್ತದೆ. ಗಾದೆಗಳು ಹೊರಸೂಸುತ್ತವೆ. ತಾಯಿ ರಂಗವಲ್ಲಿ ಬಿಡುವಾಗ, ತಂದೆ ಕೃಷಿ ಮಾಡುವಾಗ, ಪಶುಗಳನ್ನು ಮೇಯಿಸುವಾಗ, ಗೃಹಕೃತ್ಯದಲ್ಲಿ ತೊಡಗಿರುವಾಗ ಮಕ್ಕಳು ನೋಡಿ ತಿಳಿಯುತ್ತದೆ. ಹಾಗೆಯೇ ಮರಗೆಲಸ, ಚಿನ್ನದ ಕೆಲಸ, ಕಬ್ಬಿಣದ ಕೆಲಸ, ಚಮ್ಮಾರಿಕೆ ಮೊದಲಾದ ಕಸುಬಗಳು ತಂದೆಯಿಂದ ಮಗನಿಗೆ ಪ್ರಿತ್ರಾರ್ಜಿತ ಆಸ್ತಿಯಂತೆ ವರ್ಗವಾಗುತ್ತವೆ. ಆದರೆ ಇವೆಲ್ಲಾ ಓದಿ ಕಲಿತವಲ್ಲ. ಆಡಿದ್ದನ್ನು ಕೇಳಿ, ನೋಡಿದ್ದನ್ನು ಮಾಡಿ ಕಲಿತದ್ದು. ಮುತ್ತಜ್ಜನಿಂದ ಅಜ್ಜನಿಗೆ, ಅಜ್ಜನಿಂದ ತಂದೆಗೆ, ತಂದೆಯಿಂದ ಮಗನಿಗೆ, ಮಗನಿಂದ ಮೊಮ್ಮಗನಿಗೆ ಪರಂಪರೆಯಿಂದ ಬರುವಂತಹವು. ಹಾಗೆ ಪೀಳಿಗೆಯಿಂದ ಪೀಳಿಗೆಗೆ ಬರುವಾಗ ಅವು ವ್ಯತ್ಯಾಸಗೊಳ್ಳುವುದೂ ಉಂಟು. ಇದನ್ನೆಲ್ಲ ಜಾನಪದದ ಹೆಸರಿಗೆ ಜಮಾ ಮಾಡುತ್ತೇವೆ..

ಅರಸೀಕೆರೆಯಲ್ಲಿ ಉಪನ್ಯಾಸಕರಾಗಿರುವ ಡಾ.ಬಿ.ಡಿ.ಕುಮಾರ್ ಅವರ ಕೃತಿ ಹಾಸನ ಸೀಮೆಯ ಐತಿಹ್ಯಗಳು ಹಾಸನ ತಾಲ್ಲೂಕಿಗೆ ಸಂಬಂಧಿಸಿದ ಐತಿಹ್ಯಗಳ ಅಧ್ಯಯನವಾಗಿದೆ. ಲೇಖಕರ ಚೊಚ್ಚಲ ಕೃತಿ ಮತ್ತು ಜಾನಪದ ಅಧ್ಯಯನ ಕೃತಿ ಇದಾಗಿದೆ. ಲೇಖಕರು ಹಾಸನ ತಾಲ್ಲೂಕಿನ ಕೆರು ಪರಿಚಯ ಮಾಡುತ್ತಾ ಅರೆಮಲೆನಾಡಾದ ಇದು ಹರಿದ್ವರ್ಣಮಯ ಸಿರಿಯನ್ನು ಅನುಪಮ ಶಿಲ್ಪಕಲಾ ಬೆಡಗನ್ನು ಪಡೆದು ತನ್ನದೇ ಆದ ವೈಶಿಷ್ಟ್ಯತೆಯನ್ನು ಹೊಂದಿ ಬಡವರ ಊಟಿ ಎಂಬ ಖ್ಯಾತಿಯನ್ನು ಪಡೆದಿದೆ. ಇಲ್ಲಿಯ ಕಲಾಸಂಪತ್ತು ಜಗತ್ ಪ್ರಸಿದ್ಧವಾದುದು. ಹಲವು ನದಿಗಳು ಹರಿದಿರುವ ಸಂಗಮ. ಸಮುದ್ರಮಟ್ಟದಿಂದ ಸುಮಾರು 939.17 ಮೀ. ಎತ್ತರದಲ್ಲಿದ್ದು ಭೌಗೋಳಿಕವಾಗಿ ಈ ಜಿಲ್ಲೆ ಸಂಪದ್ಭರಿತವಾದ ನೈಸರ್ಗಿಕ ಸಂಪನ್ಮೂಲಗಳಿಂದ ಕೂಡಿದೆ..

ಕೃತಿಯಲ್ಲಿ ಲೇಖಕರು ತಮ್ಮ ಭೌಗೋಳಿಕ ನೆಲೆಯಲ್ಲಿ ಐತಿಹ್ಯಗಳನ್ನು ಅರ್ಥ ಮಾಡಿಕೊಳ್ಳಲು ಸಾಕಷ್ಟು ಶ್ರಮಿಸಿದ್ದಾರೆ. ಅವುಗಳ ಸಾಂಸ್ಕೃತಿಕ ಒಳತೋಟಿಗಳನ್ನು ಒಳನುಗ್ಗಿ ನೋಡಲು ಪ್ರಯತ್ನ ಮಾಡಿದ್ದಾರೆ. ಬಹುಮುಖಿ ದೃಷ್ಟಿಯಿಂದ ಅವುಗಳ ಆಶಯ ಕಾರ್ಯತತ್ಪರತೆಯನ್ನು ಪ್ರಾತ್ಯಕ್ಷೀಕರಿಸಲು ಪ್ರಯತ್ನಿಸಿದ್ದಾರೆ. ಜನಪದದಲ್ಲಿ ಜಾತಿ ಇಲ್ಲ ಅರ್ಥಾತ್ ತಾರತಮ್ಯ ಇಲ್ಲ. ಅಲ್ಲಿರುವುದು ಸಹಜ ಮಾನವೀಯ ಬದುಕು ಎಂಬುದನ್ನು ಮನಮುಟ್ಟಿಸಿದ್ದಾರೆ.. ಇದು ಡಾ. ಹಿ.ಶಿ.ರಾಮಚಂದ್ರೇಗೌಡರ ಪ್ರಶಂಸೆ.

ಅಖಂಡ ಭಾರತ ಕೃಷಿ ಸಂಸ್ಕೃತಿಯ ಋಷಿ ದೇಶವಾಗಿದೆ. ಜಾನಪದದ ತೊಟ್ಟಿಲು ಎಂದು ಜಾಗತಿಕ ಮಟ್ಟದಲ್ಲಿ ಹೆಸರಾಗಿದೆ. ಹಾಗಿದ್ದೂ ಈ ದೇಶ, ರಾಜ್ಯದಲ್ಲಿಯಾಗಲೀ ಜಾನಪದ ಕ್ಷೇತ್ರವನ್ನು ಒಂದು ವೈಜ್ಞಾನಿಕ ತಳಹದಿಯ ಮೇಲೆ ಭಾರತೀಯರು ಅಧ್ಯಯನ ಮಾಡಲೇ ಇಲ್ಲ. ಹಾಗೆ ನೋಡಿದರೆ ವಿಶ್ವದಲ್ಲಿ ಜಾನಪದ ಅಧ್ಯಯನ ಸ್ಪಷ್ಟರೂಪ ಪಡೆದದ್ದೇ 1845ರಿಂದೀಚೆಗೆ. ಪ್ಲೋಕ್ಲೋರ್ ಎಂಬ ಪದವನ್ನು ಇಂಗ್ಲೆಂಡಿನ ವಿಲಿಯಂ ಜಾನ್ ಥಾಮ್ ಟಂಕಿಸಿದ ಮೇಲೆ ಜಾನಪದ ಕ್ಷೇತ್ರ ಒಂದು ವೈಜ್ಞಾನಿಕ ಅಧ್ಯಯನದ ತಿರುವು ಪಡೆಯಿತು. ಡಾ.ಹಾ.ಮಾ.ನಾಯಕರು ಜಾನಪದ ಎಂಬ ಕನ್ನಡ ಪದವನ್ನು ಕೊಟ್ಟ ಮೇಲೆ ಇಲ್ಲಿಯೂ ಜಾನಪದದ ಅಧ್ಯಯನ ನಡೆದು ಬಂದಿದೆ. ಮೌಖಿಕ ಸಾಹಿತ್ಯ ಜಾನಪದದ ಪ್ರಮುಖ ಹಜ್ಜೆ ಗುರುತಾಗಿ ಕಥೆ, ಗೀತೆ, ಗಾದೆ ಒಗಟು, ಪುರಾಣ, ಐತಿಹ್ಯಗಳ ಅಧ್ಯಯನಗಳು ಮಹತ್ವ ಪಡೆದುಕೊಳ್ಳುತ್ತವೆ.

ಹಾಸನ ತಾಲ್ಲೂಕನ್ನು ಕೇಂದ್ರವಾಗಿಟ್ಟುಕೊಂಡು ಇಲ್ಲಿಯ ಐತಿಹ್ಯಗಳ ಮನೋಧರ್ಮ, ಆಶಯ ಆಕೃತಿಗಳನ್ನು ಶೋಧಿಸಿಕೊಡುವಲ್ಲಿ ಕೃತಿ ಯಶಸ್ವಿಯಾಗಿದೆ. ಇಲ್ಲಿಯ ಜನಜೀವನದಲ್ಲಿ ಅಡಗಿರುವ ಮೌಖಿಕ ಇತಿಹಾಸದ ಸ್ವರೂಪ, ಸಾಂಸ್ಕೃತಿಕ ಪರಂಪರೆಗಳ ಮೌಲ್ಯ, ಧಾರ್ಮಿಕ ಆಚರಣೆಗಳ ಮಹತ್ವ ಸಾಮಾಜಿಕ ಸ್ಥಿತಿಗತಿಗಳನ್ನು ಕಟ್ಟಿ ಕೊಡುವಲ್ಲಿ, ತಾಲ್ಲೂಕಿನ ಐತಿಹ್ಯಗಳು ಹೇಗೆ ಸಾಂಸ್ಕೃತಿಕ ಆಸ್ಮಿತೆಯನ್ನು ಬಿಂಬಿಸುತ್ತವೆ ಎಂಬುದನ್ನು ಲೋಕಮುಖಕ್ಕೆ ಬಿಂಬಿಸಿರುವುದು ಈ ಕೃತಿಯ ಧನಾತ್ಮಕ ಅಂಶ. ಐತಿಹ್ಯಗಳ ಕುರಿತು ಸಮೃದ್ಧವಾಗಿ ಮಾಹಿತಿಗಳನ್ನು ಕಲೆಹಾಕಿ ಯೋಗ್ಯ ರೀತಿ ಅಧ್ಯಯನ ನಡೆಸಲಾಗಿದೆ. ಕನ್ನಡ ಜಾನಪದ ಅಧ್ಯಯನಕ್ಕೆ ಇದೊಂದು ಒಳ್ಳೆಯ ಸೇರ್ಪಡೆ ಎಂಬುದು ಡಾ. ಜಿ.ಎನ್.ಉಪಾಧ್ಯರ ಅಭಿಪ್ರಾಯ.

ಜನತೆಯ ಮನಸ್ಸನ್ನು ಆಕರ್ಷಿಸಿ ಅವರ ನಾಲಿಗೆಯಲ್ಲಿ ನಲಿದು ನಿಂತು, ಕಂಠಸ್ಥ ಸಂಪ್ರದಾಯದ ಮೌಖಿಕ ಪರಂಪರೆಯಲ್ಲಿ ಉಳಿದು ಬೆಳೆದು ಬಂದಿರುವ ಐತಿಹ್ಯಗಳು ಕನ್ನಡ ನಾಡಿನಾದ್ಯಂತ ವಿಪುಲವಾಗಿವೆ

ಕಣ್ಮನ ಸೆಳೆದ ಫಲಪುಷ್ಪ ಪ್ರದರ್ಶನ

• ಪ್ರಜೋದಯ ವರದಿ

ಹಾಸನ: ಇಂದಿನಿಂದ ನಾಲ್ಕು ದಿನಗಳ ಕಾಲ ಫಲ ಪುಷ್ಪ ಪ್ರದರ್ಶನವನ್ನು ಏರ್ಪಡಿಸಲಾಗಿದೆ. ಹಾಸನದ ಜನತೆ ಮತ್ತು ಜಾತ್ರೆಗೆ ಆಗಮಿಸುವ ಜನತೆ ಹಾಸನಾಂಬ ದರ್ಶನವನ್ನು ಮುಗಿಸಿ ತದನಂತರ ಫಲಪುಷ್ಪ ಪ್ರದರ್ಶನವನ್ನು ವೀಕ್ಷಿಸಿ ಯಶಸ್ವಿಗೊಳಿಸಬೇಕಾಗಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಬಿ.ಆರ್. ಪೂರ್ಣಿಮಾ ಅವರು ತಿಳಿಸಿದ್ದಾರೆ.

ಶ್ರೀ ಹಾಸನಾಂಬ ದೇವಿ ದರ್ಶನ ಮತ್ತು ಶ್ರೀ ಸಿದ್ದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವದ ಅಂಗ ವಾಗಿ ನಗರದ ಸಿಲ್ವರ್ ಜುಬಿಲಿ ಆರ್ಚರ್ಡ್ ಪಾರ್ಕ್‌ನಲ್ಲಿ ಶುಕ್ರವಾರ ಆಯೋಜಿಸಿದ್ದ ಫಲಪುಷ್ಪ ಪ್ರದರ್ಶನ ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿದಿನ ಬೆ.08 ರಿಂದ ರಾತ್ರಿ 10 ಗಂಟೆಯವರೆಗೆ ಫಲಪುಷ್ಪ ಪ್ರದರ್ಶನವನ್ನು ವೀಕ್ಷಿಸಬಹುದಾಗಿದೆ. ಎಲ್ಲರೂ ಇದರ ಸದುಪಯೋಗ ಪಡೆದುಕೊಳ್ಳುವಂತೆ ತಿಳಿಸಿದರು.

ಫಲಪುಷ್ಪ ಪ್ರದರ್ಶನದಲ್ಲಿ ಈ ಬಾರಿ ಹಾಸನಾಂಬ ದೇವಾಲಯದ ಗೋಪುರ, ಗರುಡಗಂಬ, ದೀಪ, ಸ್ಪ್ಲಿಕ್ ಮತ್ತು ಟೈಯರ್, ಸೈಕಲ್, ವಾಹನಗಳು, ಸ್ಕೂಟರ್, ಬಾಟಲ್ ಗಳಂತಹ ಹಳೆ ಉಪಕರಣಗಳನ್ನು ಉಪಯೋಗಿಸಿ ಒಂದೊಂದು ರೀತಿಯ ಪರಿಕಲ್ಪನೆಗಳಲ್ಲಿ ಪ್ರಕೃತಿಯನ್ನು ಹಾಳು ಮಾಡದ ಹಾಗೆ ಯಾವ ರೀತಿಯಲ್ಲಿ ಉಳಿಸಿಕೊಳ್ಳಬೇಕು. ಇರುವ ವಸ್ತುಗಳನ್ನು ಹೇಗೆ ಬಳಸಬೇಕು ಎನ್ನುವುದರ ಕುರಿತು ಫಲಪುಷ್ಪ ಪ್ರದರ್ಶನ ವ್ಯವಸ್ಥೆ ಏರ್ಪಡಿಸಲಾಗಿದೆ ಎಂದು ತಿಳಿಸಿದರು.

ಹೇಮಾವತಿ ತೋಟಗಾರಿಕೆ ಸಂಘದ ಉಪಾಧ್ಯಕ್ಷರಾದ ಸುಜಾತ ನಾರಾಯಣ್, ತೋಟಗಾರಿಕೆ ಉಪನಿರ್ದೇಶಕರು ಹಾಗೂ ಹೇಮಾವತಿ ತೋಟಗಾರಿಕೆ ಸಂಘದ ನಿರ್ದೇಶಕರಾದ ಯೋಗೇಶ್ ಹೆಚ್.ಆರ್., ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರಾದ ಸೀಮಾ, ಸಹಾಯಕ ತೋಟಗಾರಿಕೆ ನಿರ್ದೇಶಕರಾದ ಪವಿತ್ರ ಜಿ.ಎನ್ ಹಾಗೂ ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದರು.

ತೋಟಗಾರಿಕೆ ಇಲಾಖೆಯ ವತಿಯಿಂದ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಬೆಳೆದಿರುವ ಬೆಳೆಗಳನ್ನು ಪ್ರದರ್ಶಿಸಲಾಗಿತ್ತು. ವಿವಿಧ ಇಲಾಖೆಯ ಮಳಿಗೆಗಳು ಹಾಗೂ ತಿಂಡಿ-ತಿನಿಸುಗಳು ಸೇರಿದಂತೆ ಅನೇಕ ವಿಧವಾದ ಮಳಿಗೆಗಳನ್ನು ಹಾಕಲಾಗಿದೆ.

ಜಿಲ್ಲೆಯಲ್ಲಿ ತೆಂಗು ಪ್ರಮುಖ ವಾಣಿಜ್ಯ ಬೆಳೆಯಾಗಿದ್ದು, ರೈತರ ಆರ್ಥಿಕತೆಯ ಮೂಲಾಧಾರವಾಗಿದೆ. ಇತ್ತೀಚೆಗೆ ಹಲವು ರೋಗ ಕೀಟ ಬಾಧೆಯಿಂದ ತೆಂಗಿನಲ್ಲಿ ಇಳುವರಿ ಕುಂಠಿಗೊಳ್ಳುತ್ತಿದ್ದು, ರೈತರು ಸಂಕಷ್ಟದಲ್ಲಿರುತ್ತಾರೆ. ಅದರಂತೆ ತೆಂಗು ಬೆಳೆಯಲ್ಲಿ ರೋಗ/ಕೀಟ ನಿರ್ವಹಣೆಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಮಾಹಿತಿಯನ್ನು ಸಹ ನೀಡಲಾಗಿದೆ.

ನೈಸರ್ಗಿಕ ಸಂಪನ್ಮೂಲಗಳಾದ ಭೂಮಾತೆ, ಸೂರ್ಯ, ಹೇಮಾವತಿ, ನೀರಿನ ಜರಿಗಳನ್ನು ವಿವಿಧ ಬಗೆಯ ಬಣ್ಣ ಬಣ್ಣದ ಹೂಗಳಿಂದ ಸಿಂಗರಿಸಿ ಪ್ರದರ್ಶಿಸಲಾಗಿದೆ. ಶ್ರೇಷ್ಠ ಕವಿಗಳು, ಪ್ರಸಿದ್ಧ ರಾಜಕಾರಣಿಗಳ ಭಾವಚಿತ್ರವನ್ನು ತರಕಾರಿ ಕೆತ್ತನೆಯ ಮೂಲಕ ಪ್ರದರ್ಶಿಸಲಾಗಿದೆ. ಜೊತೆಗೆ ರಾಧಾ-ಕೃಷ್ಣ, ಬಲರಾಮ, ಬಾತುಕೋಳಿಗಳನ್ನು ವಿವಿಧ ಬಗೆಯ ಹೂವುಗಳಿಂದ ಅಲಂಕರಿಸಿ ಪ್ರದರ್ಶಿಸಿರುವುದು ನೋಡುಗರ ಕಣ್ಮನ ಸೆಳೆಯುತ್ತಿದೆ.

ಬಾಂಗ್ಲಾ ನುಸುಳುಕೋರರ ಗಡೀಪಾರಿಗೆ ಆಗ್ರಹ

• ಪ್ರಜೋದಯ ವರದಿ

ಸಕಲೇಶಪುರ: ದೇಶದ ಭದ್ರತೆಗೆ ಆತಂಕವಾಗಿರುವ ಅಕ್ರಮ ಬಾಂಗ್ಲಾ ನುಸುಳುಕೋರರ ಪತ್ತೆಹಚ್ಚಿ ಕಾನೂನು ಕ್ರಮ ಕೈಗೊಳ್ಳಬೇಕು ಹಾಗೂ ಅಂತಹವರನ್ನು ಗಡೀಪಾರು ಮಾಡಬೇಕು ಎಂದು ಒತ್ತಾಯಿಸಿ ತಾಲ್ಲೂಕು ಬಜರಂಗದಳ ಹಾಗೂ ವಿಶ್ವ ಹಿಂದೂ ಪರಿಷತ್ ವತಿಯಿಂದ ಉಪವಿಭಾಗಾಧಿಕಾರಿ ಕಚೇರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ತಾಲ್ಲೂಕು ಸಂಯೋಜಕ ವಿಷ್ಣುರಾವ್ ಅವರು, ತಾಲ್ಲೂಕಿನಲ್ಲಿ ಅಸ್ಸಾಂ ಮೂಲದ ಕೆಲವರು ಬಾಡಿಗೆ ಮನೆಗಳಲ್ಲಿ ವಾಸವಿದ್ದು, ವಿವಿಧ ಕೂಲಿ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಇವರ ರಾತ್ರಿ ಓಡಾಟ, ಗುಂಪುಗಾರಿಕೆ, ಹೊಡೆದಾಟ ಹಾಗೂ ಅನಾವಶ್ಯಕ ಕೂಗಾಟಗಳಿಂದ ಸ್ಥಳೀಯರು ಆತಂಕಕ್ಕೆ ಒಳಗಾಗಿದ್ದಾರೆ ಎಂದು ಹೇಳಿದರು.

ಇತ್ತೀಚಿನ ಹಲವು ಕಳ್ಳತನ ಹಾಗೂ ಅಪರಾಧ ಪ್ರಕರಣಗಳಲ್ಲಿ ಇವರ ಪಾಲ್ಗೊಳ್ಳುವಿಕೆ ಕಂಡು ಬಂದಿದೆ. ಈ ಹಿನ್ನೆಲೆಯಲ್ಲಿ ಪಟ್ಟಣದಲ್ಲಿ ಶಾಂತಿ, ಕಾನೂನು ಸುವ್ಯವಸ್ಥೆ ಹಾಗೂ ಜನರ ಭದ್ರತೆಗಾಗಿ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಕಾಫಿ ತೋಟಗಳು ಹಾಗೂ ಇತರ ಜಾಗಗಳಲ್ಲಿ ಕೆಲಸ ಮಾಡುತ್ತಿರುವ ವಲಸೆ ಕಾರ್ಮಿಕರ ಗುರುತಿನ ದಾಖಲೆಗಳನ್ನು ಪರಿಶೀಲಿಸಿ, ದಾಖಲೆರಹಿತರನ್ನು ವಶಕ್ಕೆ ಪಡೆದು ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಶೀಘ್ರ ಕ್ರಮ ಕೈಗೊಳ್ಳದಿದ್ದರೆ ಬಜರಂಗದಳ ಹಾಗೂ ವಿಶ್ವ ಹಿಂದೂ ಪರಿಷತ್ ಹೋರಾಟದ ಹಾದಿ ಹಿಡಿಯಬೇಕಾಗುತ್ತದೆ ಎಂದು ಎಚ್ಚರಿಸಿದರು.

ಈ ವೇಳೆ ವಿಶ್ವ ಹಿಂದೂ ಪರಿಷತ್ ಮುಖಂಡ ಬಾಲಕೃಷ್ಣ, ಜಿಲ್ಲಾ ಮುಖಂಡ ರಘು ಪ್ರಸಾದ್, ನಗರ ಅಧ್ಯಕ್ಷ ಮಹೇಂದ್ರ ಕುಮಾರ್, ನಗರ ಸಂಯೋಜಕ ಸುಜನ್‌ಗೌಡ, ಬಿಜೆಪಿ ನಗರ ಅಧ್ಯಕ್ಷ ಲೋಕೇಶ್, ಆರ್‌ಎಸ್‌ಎಸ್ ಮುಖಂಡ ನಂದನ್, ಸನಾತನ ಸೇವಾ ಟ್ರಸ್ಟ್‌ನ ಬಾಲರಾಜ್, ರಘುಗೌಡ, ವಕೀಲ ಸುದೀಶ್ ಹಾಗೂ ಇತರರು ಉಪಸ್ಥಿತರಿದ್ದರು.

ಯಳವಾರೆ ಪಿಎಸಿಎಸ್‌ಗೆ ಹೇಮಲಿಂಗೇಗೌಡ ಅಧ್ಯಕ್ಷ

• ಪ್ರಜೋದಯ ವರದಿ

ಅರಸೀಕೆರೆ: ತಾಲ್ಲೂಕಿನ ಯಳವಾರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಹೇಮಲಿಂಗೇಗೌಡ ಹಾಗೂ ಉಪಾಧ್ಯಕ್ಷರಾಗಿ ಗೀಜಿಹಳ್ಳಿ ಇಂದ್ರಮ್ಮ ಆಯ್ಕೆಯಾಗಿದ್ದಾರೆ.

ನೂತನ ಅಧ್ಯಕ್ಷ ಹೇಮಲಿಂಗೇಗೌಡ ಅವರು ಮಾತನಾಡಿ, ಸಹಕಾರ ಸಂಘದ ಅಧ್ಯಕ್ಷನಾಗಿ ಆಯ್ಕೆಯಾಗಲು ಸಹಕರಿಸಿದ ಎಲ್ಲರಿಗೂ ಧನ್ಯವಾದ ಸಲ್ಲಿಸುತ್ತೇನೆ. ಜಿಲ್ಲಾ ಸಹಕಾರ ಬ್ಯಾಂಕ್ ಉಪಾಧ್ಯಕ್ಷ ರಾಂಪುರ ಶೇಖರಪ್ಪ ಹಾಗೂ ಜೆಡಿಎಸ್ ಮುಖಂಡ ಹೊಸೂರು ಗಂಗಣ್ಣ, ಎಲ್ಲಾ ನಿರ್ದೇಶಕರು ನನ್ನ ಆಯ್ಕೆಗೆ ಸಹಕರಿಸಿದ್ದಾರೆ ಎಂದು ಹೇಳಿದರು.

ಎಲ್ಲರ ಸಲಹೆ, ಸಹಕಾರದಿಂದ ಷೇರುದಾರ ರೈತರಿಗೆ ಒಳಿತಾಗುವ ಕೆಲಸ ಮಾಡುತ್ತೇನೆಂದು ಭರವಸೆ ನೀಡಿದರು. ಅಣ್ಣನಾಯಕನಹಳ್ಳಿ ಶಿವಣ್ಣ ಇತರರು ಹಾಜರಿದ್ದರು.

ಮಲೆ ಮಹದೇಶ್ವರ ಬೆಟ್ಟದಲ್ಲಿ ಇಂದಿನಿಂದ ದೀಪಾವಳಿ ಜಾತ್ರೆ

ಹನೂರು: ತಾಲ್ಲೂಕಿನ ಪ್ರಸಿದ್ಧ ಧಾರ್ಮಿಕ ಯಾತ್ರಾಸ್ಥಳ ಶ್ರೀ ಕ್ಷೇತ್ರ ಮಲೆಮಹದೇಶ್ವರ ಬೆಟ್ಟದಲ್ಲಿ ಅ.18 ರಿಂದ 22ರ ರವರೆಗೆ ಐದು ದಿನಗಳ ಕಾಲ ದೀಪಾವಳಿ ಜಾತ್ರಾ ಮಹೋತ್ಸವ ಜರುಗಲಿದ್ದು, ಲಕ್ಷಾಂತರ ಭಕ್ತಾದಿಗಳು ಆಗಮಿಸುವ ನಿರೀಕ್ಷೆ ಇರುವ ಹಿನ್ನೆಲೆಯಲ್ಲಿ ಶ್ರೀ ಮಲೆ ಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ.

ಅ 21ರಂದು ಬೆಳಿಗ್ಗೆ 9:15 ರ ನಂತರ ಹಾಲರವಿ ಉತ್ಸವವು ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮಿರವರ ನೇತೃತ್ವದಲ್ಲಿ ಜರುಗಲಿದೆ. ಅ.22 ರಂದು ಮಹಾರಥೋತ್ಸವು ಬೆಳಗ್ಗೆ 9:15 ರಿಂದ 9:55 ರವರೆಗೆ ಜರುಗಲಿದೆ.

ಗ್ರಾಮಸಭೆಗೆ ಅಧಿಕಾರಿಗಳ ಗೈರು: ಗ್ರಾಮಸ್ಥರ ಆಕ್ರೋಶ

• ಪ್ರಜೋದಯ ವರದಿ

ಹೆತ್ತೂರು: ಗ್ರಾಮಸಭೆಗೆ ಕೇವಲ ಮೂರು ಇಲಾಖೆಯ ಅಧಿಕಾರಿಗಳು, ಹಾಜರಾಗಿದ್ದು ಹಾಗೂ ಪಂಚಾಯತಿ ಸದಸ್ಯರ ಗೈರುಹಾಜರಿಗೆ ಗ್ರಾಮಸ್ಥರಲ್ಲಿ ಆಕ್ರೋಶ ವ್ಯಕ್ತವಾಗಿ ಗ್ರಾಮ ಸಭೆಯನ್ನು ಬಹಿಷ್ಕರಿಸಿ ಪ್ರತಿಭಟನೆ ನಡೆಸಿರುವ ಘಟನೆ ಶುಕ್ರವಾರ ಹೆತ್ತೂರಿನ ಗ್ರಾಮ ಪಂಚಾಯಿತಿಯಲ್ಲಿ ನಡೆದಿದೆ.

ಹೆತ್ತೂರು ಗ್ರಾಮ ಪಂಚಾಯಿತಿಯ ಗ್ರಾಮ ಸಭೆಯನ್ನು ಗ್ರಾ.ಪಂ. ಅಧ್ಯಕ್ಷ ನಾಗರಾಜ್ ಹಳ್ಳಿಬೈಲು ಅವರ ಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಸಭೆಗೆ ಆಯೋಜನೆ ಮಾಡಿದ್ದು ತಾಲ್ಲೂಕಿನ ಆಡಳಿತದ 57 ಇಲಾಖೆಗೆ ಮಾಹಿತಿ ಕೊಡಲಾಗಿತ್ತು. ಆದರೆ ಕೇವಲ ಮೂರು ಇಲಾಖೆಯವರು ಮಾತ್ರ ಹಾಜರಿದ್ದು, ಗ್ರಾಮ ಸಭೆಯಲ್ಲಿ ಹೆಚ್ಚಿನ ಸಂಖ್ಯೆಯ ಇಲಾಖೆಯಿಂದ ಮಾಹಿತಿ ಸಿಗುತ್ತಿಲ್ಲ, ನಮ್ಮ ಸಮಸ್ಯೆಯನ್ನು ಯಾರಿಗೆ ಹೇಳುವುದು ಯಾರಿಂದ ಮಾಹಿತಿಯನ್ನು ಪಡೆದುಕೊಳ್ಳುವುದು ಎಂದು ಸಭೆಯಲ್ಲಿ ಹಾಜರಾಗಿದ್ದ ಎಲ್ಲ ಗ್ರಾಮಸ್ಥರು ಹಾಗೂ ಪಂಚಾಯಿತಿಯ ಸದಸ್ಯರು ಸೇರಿ ಸಭೆಯನ್ನು ಬಹಿಷ್ಕಾರ ಮಾಡಿ ಬೇಜ ವಾಬ್ದಾರಿ ಮೆರೆದ ಅಧಿಕಾರಿಗಳಿಗೆ, ಸದಸ್ಯರಿಗೆ ಗ್ರಾಮ ಪಂಚಾಯತಿ ಮುಂದೆ ಪ್ರತಿಭಟಿಸಿ ಧಿಕ್ಕಾರವನ್ನು ಕೂಗಿದರು.

ನಾವು ಗ್ರಾಮ ಪಂಚಾಯಿತಿಯ ಗ್ರಾಮ ಸಭೆಯಲ್ಲಿ ರೈತರಿಗೆ ಸರ್ಕಾರದ ಇಲಾಖೆಯಿಂದ ಸಿಗುವ ಅನುಕೂಲಗಳು ಹಾಗೂ ರೈತರ ಸಮಸ್ಯೆಗಳನ್ನು ಹೇಳಿಕೊಳ್ಳಲು ಒಂದು ವೇದಿಕೆ ಸಿಗುತ್ತದೆ ಎಂದು ಎಲ್ಲಾ ರೈತರು ತಮ್ಮ ಕೆಲಸವನ್ನು ಬಿಟ್ಟು ಗ್ರಾಮಸಭೆಗೆ ಬಂದಿರುತ್ತಾರೆ. ಆದರೆ, ನಾವು ಆಯ್ಕೆ ಮಾಡಿ ಕಳುಹಿಸಿದ ಸದಸ್ಯರು, ಯಾವ ಇಲಾಖೆಯವರು ಕೂಡ ಬಾರದೆ ಬೇಜವಾಬ್ದಾರಿಯಿಂದ ವರ್ತಿಸುತ್ತಿದ್ದಾರೆ ಎಂದು ಕಿಡಿಕಾರಿದರು.

ಗ್ರಾಮಗಳಲ್ಲಿ ಅನೇಕ ಸಮಸ್ಯೆಗಳಿದ್ದು ಮುಂದಿನ ದಿನಗಳಲ್ಲಿ ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು ಕರೆತಂದು ಸ್ಥಳದಲ್ಲಿ ಸಮಸ್ಯೆಯನ್ನು ಪರಿಹರಿಸಿ ಗ್ರಾಮಸಭೆ ನಡೆಯಬೇಕೆಂದು ಸ್ಥಳೀಯ ಮುಖಂಡ ಮಹೇಶ್ ಆಕ್ರೋಶ ವ್ಯಕ್ತಪಡಿಸಿದರು.

ತಾಲ್ಲೂಕು ಕೃಷಿಕ ಸಮಾಜ ನಿರ್ದೇಶಕ ಮೋಹನ್ ಕುಮಾರ, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾಗಭೂಷಣ್, ರಕ್ಷಣಾ ವೇದಿಕೆ ರೈತ ಘಟಕ ಹೋಬಳಿ ಅಧ್ಯಕ್ಷ ಕವನಗೌಡ, ದಿವಾಕರ್ ಕುಶಾ, ಮೆಕ್ಕೀರಮನೆ ಕುಶಾಲಪ್ಪ, ಪಟೇಲ್ ಪ್ರೇಮಾನಂದ್, ರವಿಕುಮಾರ್ ಕಿರ್ಕಳ್ಳಿ, ಧರ್ಮರಾಜ್, ಕೃಷ್ಣಮೂರ್ತಿ, ಬೆಳ್ಳಿಯಪ್ಪ, ವೇದಮೂರ್ತಿ, ತಮ್ಮೇಗೌಡ ಕೊಣಬನಹಳ್ಳಿ ಸೇರಿದಂತೆ ಹೆಚ್ಚಿನ ಸಂಖ್ಯೆಯ ಗ್ರಾಮಸ್ಥರು ಹಾಜರಿದ್ದರು.

ದೇಶದಲ್ಲಿ ರಕ್ತದ ಕೊರತೆ: ಯುವಜನತೆ ದಾನಕ್ಕೆ ಮುಂದಾಗಲಿ

ರೆಡ್‌ಕ್ರಾಸ್ ಸಂಸ್ಥೆಯಿಂದ ಮೊಸಳೆಹೊಸಹಳ್ಳಿ ಸರ್ಕಾರಿ ಇಂಜಿನಿಯರಿಗ್ ಕಾಲೇಜಿನಲ್ಲಿ ರಕ್ತದಾನ ಶಿಬಿರ

• ಪ್ರಜೋದಯ ವರದಿ

ಹಾಸನ: ರಾಷ್ಟ್ರೀಯ ಸ್ವಯಂ ಪ್ರೇರಿತ ರಕ್ತದಾನ ದಿನಾಚರಣೆಯನ್ನು ಅ. 1ನೇ ತಾರೀಖಿನಂದು ಡಾ.ಜೆ.ಜಿ ಜಾಲಿ ಹುಟ್ಟುಹಬ್ಬದ ಪ್ರಯುಕ್ತ ದೇಶದಲ್ಲಿ ಆಚರಣೆ ಮಾಡಲಾಗುತ್ತಿದೆ ಎಂದು ರೆಡ್‌ಕ್ರಾಸ್ ಸಂಸ್ಥೆಯ ಸಭಾಪತಿ ಹೆಮ್ಮಿಗೆ ಮೋಹನ್ ತಿಳಿಸಿದರು.

ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಜಿಲ್ಲಾ ಶಾಖೆ ಹಾಸನ ಸರ್ಕಾರಿ ಇಂಜಿನಿಯರಿಗ್ ಕಾಲೇಜು ಮೊಸಳೆಹೊಸಹಳ್ಳಿ, ಹಾಸನ ಯುವ ರೆಡ್‌ಕ್ರಾಸ್ ಘಟಕ, ತಾಲ್ಲೂಕು ರೆಡ್ ಕ್ರಾಸ್ ಘಟಕ, ಹೊಳೆನರಸೀಪುರ ಇವರುಗಳ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದ ಸ್ವಯಂಪ್ರೇರಿತ ರಕ್ತದಾನ ಶಿಬಿರ ಕಾರ್ಯಕ್ರಮದಲ್ಲಿ ಮಾತನಾಡಿ, ಆಸ್ಟ್ರಿಯಾ ದೇಶದ ವಿಜ್ಞಾನಿ ಕಾರ್ಲ್ ಲ್ಯಾಂಡ್‌ಸ್ಟೆರ್ನ ರವರು ಎ, ಬಿ, ಎಬಿ, ಓ ಎಂಬ ರಕ್ತದ ಗುಂಪುಗಳನ್ನು ಕಂಡು ಹಿಡಿದರು. 1942ರ ಇಸವಿಯಲ್ಲಿ ದೇಶದಲ್ಲಿಯೇ ಮೊಟ್ಟಮೊದಲ ಬಾರಿಗೆ ರಕ್ತನಿಧಿ ಕೇಂದ್ರವನ್ನು ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ವತಿಯಿಂದ ಸ್ಥಾಪಿಸಲಾಯಿತು ಎಂದರು.

ದೇಶದಲ್ಲಿ 1 ಮಿಲಿಯನ್ ಯೂನಿಟ್ ರಕ್ತದ ಕೊರತೆ ಇದ್ದು, ಇದನ್ನು ನಿವಾರಿಸಲು ನಮ್ಮ ದೇಶದ ಯುವ ಜನತೆ ರಕ್ತದಾನ ಮಾಡಲು ಮುಂದಾಗಬೇಕು ಎಂದು ಕರೆ ನೀಡಿದರು. ನಂತರ ಡಾ. ಸಾವಿತ್ರಿ, ನಿರ್ದೇಶಕರು, ರೆಡ್ ಕ್ರಾಸ್ ಸಂಸ್ಥೆ ಹಾಸನ ಮಾತನಾಡಿ, ಸಾಮಾನ್ಯ ಮನುಷ್ಯನ ದೇಹದಲ್ಲಿ ಒಟ್ಟು 4.5ಲೀ ನಿಂದ 5.5 ಲೀ ರಕ್ತವು ಇರುತ್ತದೆ. ರಕ್ತದಾನ ಮಾಡುವುದರಿಂದ ದೇಹಕ್ಕೆ ಆಗುವ ಲಾಭಗಳ ಬಗ್ಗೆ ವಿದ್ಯಾರ್ಥಿಗಳಿಗೆ ವಿವರಿಸಿದರು. ರಕ್ತವನ್ನು ಕೆಂಪು ರಕ್ತಕಣ, ಬಿಳಿರಕ್ತಕಣ, ಪ್ಲೇಟ್ಲೆಟ್, ಪ್ಲಾಸ್ಮಾ ಎಂದು ನಾಲ್ಕು ಭಾಗಗಳಾಗಿ ವಿಂಗಡಿಸಲಾಗುತ್ತದೆ ಹಾಗೂ ಒಬ್ಬ ವ್ಯಕ್ತಿ ರಕ್ತದಾನ ಮಾಡುವುದರಿಂದ 4 ಜೀವಗಳನ್ನು ಉಳಿಸಬಹುದು ಎಂದು ತಿಳಿಸಿದರು.

ಡಾ. ಚೈತ್ರಾ ಅವರು ಮಾತನಾಡಿ, ರಕ್ತದ ಮಹತ್ವದ ಬಗ್ಗೆ ತಿಳಿಸಿ, ರಕ್ತಕ್ಕೆ ಪಾರ್ಯಾಯ ಮಾರ್ಗ ಇಲ್ಲ, ಆದ್ದರಿಂದ ಯುವಜನತೆ ರಕ್ತದಾನ ಮಾಡುವ ಸಾರ್ಥಕ ಮನೋಭಾವ ಬೆಳಸಿಕೊಳ್ಳಬೇಕು ಎಂದು ತಿಳಿಸಿದರು.

ಉದಯ್‌ಕುಮಾರ್ ಮಾತನಾಡಿ ರೆಡ್ ಕ್ರಾಸ್ ಸಂಸ್ಥೆ ಒಂದು ಮಾನವೀಯ ಮೌಲ್ಯಗಳ ಸಂಸ್ಥೆ, ಜಿಲ್ಲೆಯಲ್ಲಿ ಸಾಕಷ್ಟು ಸಮಾಜಮುಖಿ ಕೆಲಸಗಳನ್ನು ಮಾಡುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ರೆಡ್ ಕ್ರಾಸ್ ಸಂಸ್ಥೆಯ ನಿರ್ದೇಶಕರಾದ ಗಿರೀಶ್ ಹಾಗೂ ಚನ್ನರಾಯಪಟ್ಟಣ ತಾಲ್ಲೂಕು ಸಭಾಪತಿ ಭರತ್‌ಕುಮಾರ್ ಹಾಜರಿದ್ದರು. ಶಿಬಿರದಲ್ಲಿ ಒಟ್ಟು 45 ಜನ ಯುವಕ- ಯುವತಿಯರು ರಕ್ತದಾನ ಮಾಡಿದರು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ಟಿ. ರಂಗಸ್ವಾಮಿ, ರೆಡ್ ಕ್ರಾಸ್ ಸಂಸ್ಥೆಯ ಶಬ್ಬೀರ್ ಅಹಮದ್, ಜಯೇಂದ್ರಕುಮಾರ್, ಅವಿನಾಶ್ ಮತ್ತು ಕಾರ್ಯಕ್ರಮ ಸಂಯೋಜಕಿ ಭಾಗ್ಯಲಕ್ಷ್ಮೀ ಇತರರಿದ್ದರು.

ಹಾರನಹಳ್ಳಿ ಗ್ರಾಪಂ ಪಿಡಿಓ ವರ್ಗ: ಕೆಲಸಗಳಿಗೆ ತೊಂದರೆ

• ಪ್ರಜೋದಯ ವರದಿ

ಹಾರನಹಳ್ಳಿ: ಇಲ್ಲಿನ ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ವರ್ಗಾವಣೆಯಾಗಿ ಒಂದು ತಿಂಗಳು ಕಳೆದರೂ ಗ್ರಾಮದ ಸಾರ್ವಜನಿಕರ ಕೆಲಸ ಆಗದೆ ಪ್ರತಿನಿತ್ಯ ಗ್ರಾಮ ಪಂಚಾಯತಿ ನೋಡಿಕೊಂಡು ಹೋಗುವ ಪರಿಸ್ಥಿತಿಯಾಗಿದೆ ಎಂದು ಗ್ರಾಮಸ್ಥರುಗಳು ಆರೋಪಿಸಿದ್ದಾರೆ.



ಇ-ಸ್ವತ್ತು ಸೇರಿದಂತೆ ಅನೇಕ ಸಾರ್ವಜನಿಕರುಗಳ ಕೆಲಸಗಳು ಬಾಕಿ ಇದ್ದು ಇಲ್ಲಿ ಹೇಳುವವರು, ಕೇಳುವವರು ಇಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇಲ್ಲಿಗೆ ಬೇರೆ ಪಂಚಾಯತಿ ಪಿಡಿಓ ನಿಯೋಜನೆ ಮಾಡಿದ್ದರೂ ಕೂಡ ಅವರು ಇಲ್ಲಿಗೆ ಬಂದು ಕರ್ತವ್ಯ ನಿರ್ವಹಣೆ ಮಾಡುತ್ತಿಲ್ಲ. ಈ ಬಗ್ಗೆ ಜಿಲ್ಲಾ ಪಂಚಾಯಿತಿ ಗಮನಕ್ಕೆ ತಂದರೂ ತುರ್ತು ಗಮನ ಹರಿಸಿಲ್ಲ. ಇದರಿಂದ ಗ್ರಾಮದಲ್ಲಿ ನೈರ್ಮಲ್ಯದ ಸಮಸ್ಯೆ ತುಂಬಿ ತುಳುಕುತ್ತಿದೆ. ದೀಪಾವಳಿ ಹಬ್ಬವಿದ್ದರೂ ಸಿಬ್ಬಂದಿಯ ಮಾಸಿಕ ಸಂಬಳ ನೀಡಿಲ್ಲದಿರುವುದರಿಂದ ಸಿಬ್ಬಂದಿಗಳು, ವಾಟರ್ ಮನ್‌ಗಳಿ

ಸಂಘದ ಬೈಠೆಕ್‌ಗೆ ಬಂದು ಮಾತನಾಡಲಿ

ಪ್ರಿಯಾಂಕ್ ಖರ್ಗೆಗೆ ಶಾಸಕ ಧೀರಜ್ ಮುನಿರಾಜು ತಿರುಗೇಟು

• ಪ್ರಜೋದಯ ವರದಿ

ಹಾಸನ: ಸಚಿವ ಪ್ರಿಯಾಂಕ್ ಖರ್ಗೆ ಅವರು ಆರ್‌ಎಸ್‌ಎಸ್ ಬಗ್ಗೆ ಮಾತನಾಡಬೇಕೆಂದರೆ ಮೊದಲು ಸಂಘದ ಬೈಠೆಕ್‌ಗೆ ಬಂದು ಪರಿಚಯ ವರ್ಗದಲ್ಲಿ ಪಾಲ್ಗೊಳ್ಳಬೇಕು. ಆಗ ಸಂಘ, ಸ್ವಯಂ ಸೇವಕ, ಪ್ರಚಾರಕರು, ವ್ಯವಸ್ಥೆ, ವ್ಯಕ್ತಿ ನಿರ್ಮಾಣ ಮತ್ತು ರಾಷ್ಟ್ರ ನಿರ್ಮಾಣ ಎಂದರೇನು ಎಂಬುದನ್ನು ಅರ್ಥವಾಗುತ್ತದೆ ಎಂದು ಶಾಸಕ ಧೀರಜ್ ಮುನಿರಾಜು ಅವರು ಆಕ್ರೋಶ ವ್ಯಕ್ತಪಡಿಸಿದರು.

ಹಾಸನಾಂಬ ದೇವಿಯ ದರ್ಶನ ಪಡೆದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರದ ಆರ್‌ಎಸ್‌ಎಸ್ ಚಟುವಟಿಕೆ ನಿಷೇಧದ ಚಿಂತನೆಗೆ ಅಸಮಾಧಾನ ವ್ಯಕ್ತಪಡಿಸಿದರು. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶತಾಬ್ದಿ ವರ್ಷ ನಡೆಯುತ್ತಿದೆ. ನಾನು ಸ್ವಯಂ ಸೇವಕ, ಸಂಘದಿಂದಲೇ ಶಿಕ್ಷಣ ಪಡೆದಿದ್ದೇನೆ. ಪ್ರಿಯಾಂಕ್ ಖರ್ಗೆ ಅವರು ಯಾರೋ ಮೂರನೇ ವ್ಯಕ್ತಿ ನೀಡಿದ ತಪ್ಪು ಮಾಹಿತಿಯನ್ನು ಆಧರಿಸಿ ಮಾತನಾಡುತ್ತಿದ್ದಾರೆ. ನೀವು ಮಲ್ಲಿಕಾರ್ಜುನ ಖರ್ಗೆ ಪುತ್ರರು, ಸಚಿವರಾಗಿದ್ದೀರಿ. ಆರ್‌ಎಸ್‌ಎಸ್ ಬಗ್ಗೆ ಮಾತನಾಡಬೇಕೆಂದರೆ ಮೊದಲು ಆ ಬಗ್ಗೆ ತಿಳಿಕೊಳ್ಳಬೇಕೆಂದು ಸಲಹೆ ನೀಡಿದರು.

ಪ್ರಿಯಾಂಕ್ ಖರ್ಗೆ ಅವರ ಹೇಳಿಕೆ ರಾಜಕೀಯ ಉದ್ದೇಶದಷ್ಟೇ ಎಂದು ಟೀಕಿಸಿ, ಶತಾಬ್ದಿ ವರ್ಷದಲ್ಲಿ ಹೇಳಿಕೆ ಕೊಟ್ಟರೆ ನಾನು ಹೈಲೆಟ್ ಆಗುತ್ತೇನೆಂದು ಮಾತನಾಡಬೇಡಿ. ಇದು ರಾಜಕೀಯ ಪಕ್ಷವಲ್ಲ, ಸಂಘಟನೆಯಾಗಿದೆ. ರಾಜಕೀಯಕ್ಕೆ ಇದನ್ನು ತರಬೇಡಿ. ಸಂಘದ ಕಾರ್ಯ ಚಟುವಟಿಕೆಗೆ ಯಾವುದೇ ಅಧಿಕಾರಿ ಹೋಗಬಾರದು ಹೇಳುತ್ತಾರೆ. ಹಾಗಾದರೆ, ನಾನು ಸ್ವತಃ ಎನ್‌ಜಿಓ ನಡೆಸುತ್ತೇನಿ. ಶಾಲೆಗಳಲ್ಲಿ ಆರೋಗ್ಯ ಶಿಬಿರ ಮಾಡುತ್ತೇನೆ ಅದೂ ತಪ್ಪೇ, ಜನರ ಹಿತಕ್ಕಾಗಿ ನಡೆಯುವ ಕಾರ್ಯಕ್ರಮಗಳಿಗೆ ತಡೆ ನೀಡುವುದು ಸರಿಯಲ್ಲ ಎಂದು ಹೇಳಿದರು.

ಕಾಂಗ್ರೆಸ್ ವಿರುದ್ಧ ಹೆಚ್.ಡಿ.ಕೆ. ವಾಗ್ಬಾಣ

» ಮೊದಲನೇ ಪುಟದಿಂದ

ಅಭಿವೃದ್ಧಿಯಾಗುತ್ತದೆಂಬುದನ್ನು ನಂಬಲು ಸಾಧ್ಯವಿಲ್ಲ. ಮಹಿಳೆಯರು ಗೃಹಲಕ್ಷ್ಮೀ ಹಣ ಸಂಗ್ರಹಿಸಿ ವಾಷಿಂಗ್ ಮಷಿನ್, ಟೈಲರಿಂಗ್ ಮಷಿನ್, ರೆಫ್ರಿಜರೇಟರ್ ಖರೀದಿಸುವುದು ಅಭಿವೃದ್ಧಿಯೇ. ತೆರಿಗೆ ಹೆಸರಿನಲ್ಲಿ ಜನರನ್ನು ವಂಚಿಸುತ್ತಿರುವುದು ಸರಿಯೇ. ಖಜಾನೆ ತುಂಬಿಸಿಕೊಳ್ಳಲು ಮದ್ಯ ಮಾರಾಟ ಪ್ರಮಾಣ ಹೆಚ್ಚಳ ಮಾಡುವುದು ಆಡಳಿತದ ಲಕ್ಷಣವೇ ಎಂದು ತರಾಟೆಗೆ ತೆಗೆದುಕೊಂಡರು.

ಅಭಿವೃದ್ಧಿಯಾದರೆ ಅಸೂಯೆ ಏಕೆ

ಬೆಂಗಳೂರು ನಗರವನ್ನು ಗ್ರೇಟರ್ ಬೆಂಗಳೂರು ಅಥಾರಿಟಿ (ಜಿಬಿಎ) ಮಾಡಿ ಅಭಿವೃದ್ಧಿ ಪಡಿಸುತ್ತಿರುವುದು ಸಹಿಸದೆ ನಾನು ಅಸೂಯೆ ಪಡುತ್ತಿದ್ದೇನೆಂದು ಉಪಮುಖ್ಯಮಂತ್ರಿ ಹೇಳಿದ್ದಾರೆ. ಸುರಂಗ, ಹೊರವರ್ತುಲ ರಸ್ತೆಗೆ 2006-07ರಲ್ಲಿ ನಾವೇ ಯೋಜನೆ ರೂಪಿಸಿದ್ದೆವು. 16 ವರ್ಷಗಳ ಹಿಂದೆಯೇ ಘೋಷಣೆ ಮಾಡಿದ್ದ ಯೋಜನೆಗಳನ್ನು ಈಗ ರಿಮೇಕ್ ಮಾಡುತ್ತಿದ್ದಿರಿ. ಅಭಿವೃದ್ಧಿ ಕಾಮಗಾರಿಗೆ ಅಸೂಯೆ ಪಡುವ ಬುದ್ಧಿ ನನಗಿಲ್ಲವೆಂದು ಡಿ.ಕೆ.ಶಿವಕುಮಾರ್ ಹೇಳಿಕೆಗೆ ತಿರುಗೇಟು ನೀಡಿದರು.

ಶಿವಕುಮಾರ್ ಹಾಸನಾಂಬ ಸನ್ನಿಧಿಯಲ್ಲಿ ಖಡ್ಗಮಾಲಾ ಪೂಜೆ ಮಾಡಿಸಿದ್ದಾರೆ. ನಾವು ದೈವಭಕ್ತರೇ. ಆದರೆ, ಇವರ ಹಾಗೆ ಯಾವತ್ತೂ ಮಾಡಿಲ್ಲ. ಪದ ಬಳಕೆಯಲ್ಲಿ ಶುದ್ಧತೆ ಇಲ್ಲದಿದ್ದರೆ ಯಾವ ಪೂಜೆ ಮಾಡಿದರೇನು ಫಲ. ರಾಜ್ಯದ ಜನರು ನಿಮ್ಮನ್ನು ಉಪ ಮುಖ್ಯಮಂತ್ರಿ ಮಾಡಿದ್ದಾರೆ. ಚುನಾವಣೆಗೂ ಮೊದಲು ನೀಡಿದ್ದ ಭರವಸೆಗಳನ್ನು ಈಡೇರಿಸಲು ಸಾಧ್ಯವಾಗಿಲ್ಲ. ಪ್ರತಿದಿನ ಸುಳ್ಳು ಹೇಳುವುದನ್ನು ಬಿಟ್ಟರೆ ಬೇರೆ ಏನೂ ಮಾಡುತ್ತಿಲ್ಲ. ಅಧಿಕಾರಕ್ಕೆ ಬಂದ ದಿನದಿಂದಲೂ ಮುಖ್ಯಮಂತ್ರಿ ಬದಲಾವಣೆ ಯದ್ದೇ ಚರ್ಚೆಯಾಗುತ್ತಿದೆ. ಅಧಿಕಾರ ಯಾರಪ್ಪನ ಆಸ್ತಿಯಲ್ಲ. ಯಾರನ್ನು ಆಯ್ಕೆ ಮಾಡ ಬೇಕೆಂಬುದನ್ನು ಜನರು ನಿರ್ಧರಿಸುತ್ತಾರೆ. ಜನರ ಆಶೀರ್ವಾದ ಪಡೆದಿರುವ ನೀವು ಮಾಡಬೇಕಿರುವ ಕೆಲಸಗಳತ್ತ ಗಮನ ಹರಿಸಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

136 ಸೀಟು ಗೆದ್ದಿದ್ದು ಹೇಗೆ

ರಾಜ್ಯದಲ್ಲಿ ಮತಗಳ್ಳತನ ನಡೆದಿದೆ ಎಂದು ಆರೋಪಿಸುವ ಕಾಂಗ್ರೆಸ್ ರಾಜ್ಯದಲ್ಲಿ 136 ಸೀಟು ಗೆಲ್ಲಲು ಹೇಗೆ ಸಾಧ್ಯವಾಯಿತು. ಈ ಬಗ್ಗೆ ಆರೋಪಿಸುತ್ತಿರುವ ಆಳಂದ ಶಾಸಕರು ಕಳ್ಳತನದ ಓಟಿನಿಂದಲೇ ಗೆದ್ದಿದ್ದಾರಾ ಎಂಬುದನ್ನು ಹೇಳಬೇಕು.

ಕಾಂಗ್ರೆಸ್‌ನವರೇ ದೊಡ್ಡ ದರೋಡೆಕೋರರು. ಇಷ್ಟು ವರ್ಷಗಳಿಂದ ಕಳ್ಳತನದಿಂದಲೇ ಗೆದ್ದಿದ್ದಾರೆ. ಅವರಿಗೆ ಜನರ ಒಳಿತು ಬೇಕಿಲ್ಲ, ಕೇವಲ ಪ್ರಚಾರದಲ್ಲಿರಬೇಕೆಂದು ಈ ರೀತಿಯ ವಾದ ಮಾಡುತ್ತಾರೆಂದು ಆಕ್ರೋಶ ವ್ಯಕ್ತಪಡಿಸಿದರು. ಜೆಡಿಎಸ್ ಶಾಸಕರಾದ ಎ.ಮಂಜು, ಸುರೇಶ್‌ಬಾಬು, ಹರೀಶ್‌ಗೌಡ, ಶರಣ ಪ್ರಕಾಶ್ ಕುಂದಕೂರು, ಹೆಚ್.ಪಿ. ಸ್ವರೂಪ್, ರಾಜು, ವಿಧಾನ ಪರಿಷತ್ ಸದಸ್ಯ ಬೋಜೇಗೌಡ, ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ, ಜೆಡಿಎಸ್ ಯುವ ಘಟಕ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಮುಖಂಡ ಎನ್. ಆರ್.ಸಂತೋಷ್ ಇತರರಿದ್ದರು.

ಸಿಎಂಗೆ ಬಹಿರಂಗ ಸವಾಲು

ಶಾಸಕರಿಗೆ ಅನುದಾನ ಹಂಚಿಕೆ ವಿಚಾರದಲ್ಲಿ ತಾರತಮ್ಯ ಮಾಡಿಲ್ಲವೆಂಬುದು ನಿಜವೇ ಆಗಿದ್ದರೆ ಮುಖ್ಯಮಂತ್ರಿ ಬಹಿರಂಗ ಚರ್ಚೆಗೆ ಬರಲಿ ಎಂದು ಸಚಿವ ಹೆಚ್.ಡಿ. ಕುಮಾರಸ್ವಾಮಿ ಸವಾಲೆಸೆದರು.

ನನಗೆ ಐದು ವರ್ಷ ಅಧಿಕಾರ ಕೊಟ್ಟಿಲ್ಲ. ಜಿ.ಹೆಚ್.ಪಟೇಲ್ ಮುಖ್ಯಮಂತ್ರಿಯಾಗಿದ್ದಾಗಲೂ ನೀವೇ ಅಧಿಕಾರ ನಡೆಸುತ್ತಿದ್ದಿರಿ. ದೇವೇಗೌಡರು ದೆಹಲಿ ರಾಜಕಾರಣಕ್ಕೆ ತೆರಳಿದ ಬಳಿಕ ರಾಜ್ಯದಲ್ಲಿ ಅಭಿವೃದ್ಧಿ ಎಂಬುದು ಮರೀಚಿಕೆಯಾಯಿತು. ಅಂದು ಬೆಂಗಳೂರಿನ ರಸ್ತೆಗಳು ಗುಂಡಿಮಯವಾಗಿದ್ದವು, ಇಂದಿಗೂ ಅದೇ ಪರಿಸ್ಥಿತಿ ಇದೆ ಎಂದರು.

2018ರಲ್ಲಿ ಮುಖ್ಯಮಂತ್ರಿಯಾಗಿದ್ದ ನಾನು ಶಾಸಕರಿಗೆ ಸಾವಿರಾರು ಕೋಟಿ ರೂ. ಅನುದಾನ ನೀಡಿದ್ದೆ. ಈಗಲೂ ಅದೇ ಅನುದಾನದ ಕೆಲಸಗಳು ನಡೆಯುತ್ತಿವೆ ಎಂದು ಕಾಂಗ್ರೆಸ್ ಶಾಸಕರೇ ನನಗೆ ಹೇಳಿದ್ದಾರೆಂದು ಚಾಟಿ ಬೀಸಿದರು.

ಬೆಕ್ಕಿಗೆ ಗಂಟೆ ಕಟ್ಟುವವರ್‍ಯಾರು

ಸ್ವಾತಂತ್ರ್ಯ ಪೂರ್ವದಲ್ಲೂ ಭ್ರಷ್ಟಾಚಾರವಿತ್ತು. ಈಗಲೂ ಅದು ವಿವಿಧ ಸ್ವರೂಪಗಳಲ್ಲಿ ಚಲಾವಣೆಯಲ್ಲಿದೆ. ಹಿಂದಿನ ಬಿಜೆಪಿ ಸರ್ಕಾರವನ್ನು ಶೇ.40 ಕಮೀಷನ್ ಸರ್ಕಾರವೆಂದು ಹೀಗಳೆದಿದ್ದಿರಿ. ಪ್ರಕರಣ ತನಿಖೆಗೆ ವಿಶೇಷ ತಂಡವನ್ನು ರಚಿಸಿದ್ದಿರಿ. ಅದರಿಂದ ಯಾವ ಪ್ರಯೋಜನವು ಆಗಲಿಲ್ಲ. ಅಂದು ಬಿಜೆಪಿ ವಿರುದ್ಧ ಕಮೀಷನ್ ಆರೋಪ ಮಾಡಿದ್ದ ಗುತ್ತಿಗೆದಾರರು ಇಂದು ಕಾಂಗ್ರೆಸ್ ವಿರುದ್ಧ ಮುಗಿಬಿದ್ದಿದ್ದಾರೆ. ಬೆಕ್ಕಿಗೆ ಗಂಟೆ ಕಟ್ಟುವವರ್‍ಯಾರು ಎಂಬು ಪರಿಸ್ಥಿತಿ ನಿರ್ಮಾಣವಾಗಿದೆ. ಇಂತಹ ಭ್ರಷ್ಟ ಸರ್ಕಾರವನ್ನು ನಾನು ಎಂದಿಗೂ ನೋಡಿಲ್ಲವೆಂದು ದೂರಿದರು.

ಚನ್ನರಾಯಪಟ್ಟಣ: ಬೆಂಗಳೂರಿನಿಂದ ಹಾಸನದ ಅಧಿದೇವತೆ ಹಾಸನಾಂಬ ದರ್ಶನಕ್ಕಾಗಿ ಕುಟುಂಬ ಸಮೇತ ತೆರಳುತ್ತಿದ್ದ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರನ್ನು ತಾಲ್ಲೂಕಿನ ಹಿರೀಸಾವೆಯ ಅನಘ ಗ್ರ್ಯಾಂಡ್ ಹೋಟೆಲ್ ಬಳಿ ಜೆಡಿಎಸ್ ಕಾರ್ಯಕರ್ತರು ಸ್ವಾಗತಿಸಿದರು. ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಹೆಚ್.ಈ.ಬೋರಣ್ಣ, ಪ್ರಮುಖರಾದ ಅರಿಶಿನ ಪುಡಿ ವೆಂಕಟೇಶ್, ಶ್ರೇಯಸ್ ರಾಮಣ್ಣ, ಬಾಬು, ದೊರೆ, ಅಶೋಕ್ ಇತರರಿದ್ದರು.

ಚಿನ್ನಾಭರಣ ಕಳವು

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಮನೆ ಬಳಿ ಇಟ್ಟಿದ್ದ ಕೀ ನೆರವಿನಿಂದ ಒಳನುಗ್ಗಿರುವ ಕಳ್ಳರು 7 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕದ್ದಿರುವ ಘಟನೆ ತಾಲ್ಲೂಕಿನ ಗೌಡಗೆರೆ ಗ್ರಾಮದಲ್ಲಿ ನಡೆದಿದೆ.

ಸತೀಶ್‌ಕುಮಾರ್ ಹಾಗು ಪತ್ನಿ ಪುಷ್ಪ ಅವರು ಅ. 15 ರಂದು ಕಾರ್ಯನಿಮಿತ್ತ ಮನೆಗೆ ಬೀಗ ಹಾಕಿ ಕೀಯನ್ನು ಮನೆಯ ಮುಂಭಾಗ ಬಟ್ಟೆ ಹೊಲೆಯುವ ಮಿಷನ್ ಹತ್ತಿರ ಇಟ್ಟು ಪಟ್ಟಣಕ್ಕೆ ತೆರಳಿದ್ದರು. ಸ್ವಲ್ಪ ಸಮಯದ ಬಳಿಕ ವಾಪಾಸ್ ಬಂದು ನೋಡಿದಾಗ ಕೀ ಇಟ್ಟಿರುವ ಜಾಗ ಬದಲಾಗಿರುವುದು ಗೊತ್ತಾಗಿದೆ. ಕಳ್ಳತನದ ಸಂಶಯ ಬಂದು ಬೀರು ಪರಿಶೀಲಿಸಿದ್ದಾರೆ. ಬೀರು ಮುರಿದಿರುವ ಕಳ್ಳರು 20 ಸಾವಿರ ರೂ. ನಗದು, 25 ಗ್ರಾಂ ತೂಕದ ಚಿನ್ನದ ಮಾಂಗಲ್ಯ ಸರ, 20 ಗ್ರಾಂ ತೂಕದ ನೆಕ್ಲೇಸ್, 15 ಗ್ರಾಂ ತೂಕದ ಕಿವಿ ಓಲೆ ಸೆಟ್, 14 ಗ್ರಾಂ ತೂಕದ 5 ಚಿನ್ನದ ಉಂಗುರ, 8 ಗ್ರಾಂ ತೂಕದ 2 ಜೊತೆ ಓಲೆ ಕದ್ದಿದ್ದಾರೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಏಕಾಏಕಿ ಸುರಿದ ಧಾರಾಕಾರ ಮಳೆಗೆ ಜನರ ಪರದಾಟ

» ಮೊದಲನೇ ಪುಟದಿಂದ

ಆರ್ಭಟಕ್ಕೆ ಜನಜೀವನ ಅಸ್ತವ್ಯಸ್ತಗೊಂಡಿತು. ಮಳೆಯಿಂದಾಗಿ ಹಾಸನಾಂಬ ದರ್ಶನಕ್ಕೆ ಲಕ್ಷಾಂತರ ಸಂಖ್ಯೆಯಲ್ಲಿ ಆಗಮಿಸಿದ್ದ ಭಕ್ತರು ಮಳೆಯಿಂದ ರಕ್ಷಣೆ ಪಡೆಯಲು ಮುಂದಾದ ವೇಳೆ ನೂಕುನುಗ್ಗಲು ಉಂಟಾಗಿತು. ಜನರನ್ನು ನಿಯಂತ್ರಿಸಲು ಪೊಲೀಸರು, ಅಧಿಕಾರಿಗಳು ಪರದಾಡುವಂತಾಯಿತು. ಧರ್ಮ ದರ್ಶನದ ಸಾಲಿನಲ್ಲಿ ಜರ್ಮನ್ ಟೆಂಟ್ ವ್ಯವಸ್ಥೆ ಮಾಡಿದ್ದರಿಂದ ಸಾಲಿನಲ್ಲಿ ನಿಂತಿದ್ದ ಭಕ್ತರಿಗೆ ಅಷ್ಟಾಗಿ ಸಮಸ್ಯೆ ಉಂಟಾಗಲಿಲ್ಲ. ಆದರೆ, 300ರೂ., 1000 ರೂ., ಟಿಕೆಟ್ ಪಡೆದುಕೊಳ್ಳುವ ಸ್ಥಳದಲ್ಲಿ ಟೆಂಟ್ ಇಲ್ಲದಿದ್ದರಿಂದ ಜನರು ಮಳೆಯಲ್ಲಿ ನೆನೆಯಬೇಕಾಯಿತು.

ಸಂಸದ ಶ್ರೇಯಸ್ ಪಟೇಲ್ ಅವರು ಮಳೆಯ ನಡುವೆಯೂ ನೆನೆಯುತ್ತಾ ಭಕ್ತರನ್ನು ನಿಯಂತ್ರಿಸಿ, ಶಾಂತ ರೀತಿಯಲ್ಲಿ ದರ್ಶನ ಮಾಡುವಂತೆ ಸಲಹೆ ನೀಡಿದರು. ಪೊಲೀಸರು ಕೂಡ ಮಳೆಯಲ್ಲಿ ನೆನೆದು ಕೊಂಡೇ ಜನಸಂದಣಿ ನಿಯಂತ್ರಿಸಿದರು.

ಮಳೆಯ ಕಾರಣಕ್ಕೆ ಆಗಸದಲ್ಲಿ ಹಾಸನ ಹೆಲಿಕಾಪ್ಟರ್ ಹಾರಾಟಕ್ಕೂ ತೊಂದರೆ ಯುಂಟಾಗಿ ಸ್ಥಗಿತಗೊಳಿಸಿದ್ದರಿಂದ ಹೆಲಿ ಕಾಪ್ಟರ್ ರೈಡ್‌ಗೆ ಬಂದಿದ್ದವರು ನಿರಾಸೆ ಯಿಂದ ತೆರಳಿದರು. ಹಾಸನಾಂಬ ದರ್ಶನೋತ್ಸವ ಮತ್ತು ಸಿದ್ದೇಶ್ವರಸ್ವಾಮಿ ಜಾತ್ರಾ ಮಹೋತ್ಸವದ ಪ್ರಯುಕ್ತ ನಗರದ ಸಿಲ್ವರ್ ಜುಬಿಲಿ ಪಾರ್ಕ್ ಹಮ್ಮಿಕೊಂಡಿರುವ ಫಲ ಪುಷ್ಪ ಪ್ರದರ್ಶನ ವೀಕ್ಷಣೆಗೆ ಬಂದಿದ್ದ ಜನರಿಗೂ ಮಳೆಯಿಂದ ಅಡ್ಡಿಯುಂಟಾಯಿತು. ಸಂಜೆ ವೇಳೆ ವೀಕ್ಷಣೆಗೆ ಬಂದಿದ್ದ ನೂರಾರು ಜನರು ಮಳೆಯಿಂದ ನೆನೆಯ ಬೇಕಾಯಿತು. ಇದೇ ರೀತಿ ನಗರ ಸರ್ಕಾರಿ ವಿಜ್ಞಾನ ಕಾಲೇಜಿನ ಕ್ರಿಕೆಟ್ ಮೈದಾನದಲ್ಲಿ ಹಮ್ಮಿಕೊಂಡಿರುವ ಆಹಾರ ಮೇಳ ಮತ್ತು ವಸ್ತು ಪ್ರದರ್ಶನಕ್ಕೂ ಸಮಸ್ಯೆಯಾಯಿತು. ಕೇವಲ ಒಂದು ಗಂಟೆಗಳ ಕಾಲ ಸುರಿದ ಭಾರೀ ಮಳೆಗೆ ರಸ್ತೆ ಯ ತುಂಬೆಲ್ಲ ಮಳೆ ನೀರು ನಿಂತುಕೊಂಡು ಸಂಚಾರಕ್ಕೆ ಸವಾರರು ಪರದಾಡುವಂತಾಯಿತು.

ಕಳೆದ ಒಂದು ವಾರದಿಂದ ನಿರಂತರವಾಗಿ ಮಳೆಯಾಗುತ್ತಿರುವುದರಿಂದ ಬಯಲು ಸೀಮೆ ಮತ್ತು ಅರೆ ಮಲೆನಾಡು ಭಾಗದ ರೈತರಿಗೆ ಅನುಕೂಲವಾಗಿದೆ. ಶುಕ್ರವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಸಕಲೇಶಪುರ ಪಟ್ಟಣ, ಬೆಳಗೋಡು, ಯಸಳೂರು, ಹೆತ್ತೂರು, ಕೆ.ಹೊಸಕೋಟೆಯಲ್ಲಿ ತಲಾ ಒಂದುವರೆ ಇಂಚಿಗೂ ಹೆಚ್ಚಿನ ಮಳೆಯಾಗಿದೆ. ಹಾನುಬಾಳು, ಕಟ್ಟಾಯ, ಹಿರಿಸಾವೆ, ಬೇಲೂರು, ಕುಂದೂರು ಪಾಳ್ಯ ಹೋಬಳಿ ವ್ಯಾಪ್ತಿಯಲ್ಲಿ ತಾಲಾ 1 ಇಂಚಿನಷ್ಟು ಮಳೆಯಾಗಿದೆ. ಅ.21 ರವರೆಗೂ ಮಳೆಯಾಗಲಿದೆ ಎಂದು ಹವಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಹಾಸನಾಂಬ ಭಕ್ತರು ಸಂಯಮದಿಂದ ವರ್ತಿಸಲು ಡಿ.ಸಿ. ಮನವಿ

» ಮೊದಲನೇ ಪುಟದಿಂದ

ಬೇಕಾದ ಪರಿಸ್ಥಿತಿ ಇದೆ. ಇಲ್ಲವಾದರೆ ಲಕ್ಷಾಂತರ ಜನರು ದರ್ಶನ ಪಡೆಯಲು ಆಗುವುದಿಲ್ಲ. ಭಕ್ತರು ಅರ್ಥ ಮಾಡಿಕೊಂಡು ಶಾಂತಿಯಿಂದ ಸಹಕರಿಸಬೇಕು. ತಾಳ್ಮೆ, ಸಂಯಮದಿಂದ ಇದ್ದರೆ ಎಲ್ಲರಿಗೂ ಅನುಕೂಲವಾಗುತ್ತದೆ. ಜನದಟ್ಟಣೆ ನಿಯಂತ್ರಣಕ್ಕಾಗಿ ಸಿಬ್ಬಂದಿ ತಳ್ಳಿದ್ದರೆ ಅದಕ್ಕೆ ಕ್ಷಮೆ ಕೋರುತ್ತೇವೆ. ಸಾರ್ವಜನಿಕರ ಅನುಕೂಲಕ್ಕಾಗಿ ಇಂತಹ ಕ್ರಮ ಕೈಗೊಳ್ಳಲಾಗುತ್ತಿದೆ ಹೊರತು ಅನ್ಯ ಉದ್ದೇಶದಿಂದ ಅಲ್ಲ. ಏನೇನೋ ನಿರೀಕ್ಷೆಗಳೊಂದಿಗೆ ದೇವಸ್ಥಾನಕ್ಕೆ ಬರಬೇಡಿ ಎಂದರು.

ನಿರೀಕ್ಷೆಗಿಂತ ಮೂರು ಪಟ್ಟು ಹೆಚ್ಚು ಭಕ್ತರು ಬರುತ್ತಿರುವುದರಿಂದ ಸಮಸ್ಯೆಯಾಗುತ್ತಿದೆ. ಭಕ್ತಾಧಿಗಳ ಸುರಕ್ಷತೆಯೇ ನಮ್ಮ ಆದ್ಯತೆ. ಹೆಚ್ಚು ಸಮಯ ಸರದಿ ಸಾಲಿನಲ್ಲಿ ನಿಲ್ಲಲು ಮಾನಸಿಕವಾಗಿ ಸಿದ್ಧರಾಗಿರಿ ಎಂದರು. ಎಷ್ಟು ಸಮಯಕ್ಕೆ ದರ್ಶನ ಆಗುತ್ತದೆ ಎಂಬುದನ್ನು ಎಲ್ಲಾ ಸಾಲುಗಳಲ್ಲಿ ಈಗಾಗಲೇ ಫಲಕ ಹಾಕಿದ್ದೇವೆ. ಧರ್ಮ ದರ್ಶನಕ್ಕೆ 7 ರಿಂದ 8 ಗಂಟೆ, 1000 ರೂ. ಸಾಲಿನಲ್ಲಿ 3 ರಿಂದ 4 ಗಂಟೆ, 300 ರೂ. ಸಾಲಿನಲ್ಲಿ ಬರುವ ವರಿಗೆ 6 ರಿಂದ 7 ಗಂಟೆ ಸಮಯ ಬೇಕಾಗುತ್ತದೆಂದರು.

ಹಾಸನಾಂಬ ದರ್ಶನಕ್ಕೆ ಜನಸ್ತೋಮ: ಐತಿಹಾಸಿಕ ದಾಖಲೆ

» ಮೊದಲನೇ ಪುಟದಿಂದ

ಆಗಮಿಸಿದ್ದರಿಂದ ಹೆಚ್ಚುವರಿಯಾಗಿ 2 ಗಂಟೆಗೂ ಹೆಚ್ಚು ಸಮಯ ದರ್ಶನಕ್ಕೆ ಅವಕಾಶ ನೀಡಲಾಯಿತು. ಶುಕ್ರವಾರ ಮುಂಜಾನೆಯಿಂದಲೇ ಮಳೆ, ಬಿಸಿಲು ಲೆಕ್ಕಿಸದೇ ದರ್ಶನಕ್ಕೆ ಜನ ಸಾಗರವೇ ಹರಿದು ಬಂದಿತ್ತು. ಧರ್ಮ ದರ್ಶನ ಸಾಲು ಮಾತ್ರವಲ್ಲ, 1000, 300 ರೂ.ಟಿಕೆಟ್ ಸರತಿ ಸಾಲುಗಳೂ ತುಂಬಿ ತುಳುಕುತ್ತಿದ್ದವು. ಶೀಘ್ರ ದರ್ಶನ ಆಸೆಯಿಂದ ಟಿಕೆಟ್ ಖರೀದಿಸಿದರೂ 5-6 ಗಂಟೆ ಕಾಯುವುದು ಅನಿವಾರ್ಯ ಸೃಷ್ಟಿಯಾಗಿತ್ತು. ನಿರೀಕ್ಷೆಗೂ ಮೀರಿ ದರ್ಶನಕ್ಕೆ ಭಕ್ತರು ಬರುತ್ತಿರುವುದರಿಂದ ದರ್ಶನಾವಕಾಶ ಕಲ್ಪಿಸಲು ಜಿಲ್ಲಾಡಳಿತ ಹರಸಾಹಸ ಮಾಡುವಂತಾಗಿದೆ.

ಸಹಕರಿಸಲು ಸಚಿವರ ಮನವಿ

ನಿರೀಕ್ಷೆಗೆ ಮೀರಿ ಜನರು ಆಗಮಿಸುತ್ತಿರುವುದರಿಂದ ದೇವಾಲಯದೊಳಗೆ ಮೆಟ್ಟಿಲು ಹತ್ತಿದ ತಕ್ಷಣ ದೇವಿಯನ್ನು ನೋಡಬಹುದು. ದಯವಿಟ್ಟು ಚಲಿಸುತ್ತಲೇ ಇರಿ. ಅಡ್ಡಲಾಗಿ ಚಲಿಸಬೇಡಿ ನಿಲ್ಲಿಸಬೇಡಿ ಅಥವಾ ನಿಧಾನಗೊಳಿಸಬೇಡಿ. ನಿರ್ಗಮನ ದ್ವಾರಗಳು ಎಡ ಮತ್ತು ಬಲ ಎರಡೂ ಕಡೆಗಳಲ್ಲಿವೆ. ದಯವಿಟ್ಟು ವೇಗವಾಗಿ ಚಲಿಸಿ. ಶುಕ್ರವಾರದಿಂದ ಪ್ರತಿದಿನ 3 ಲಕ್ಷ ಜನರಿಗೆ ದರ್ಶನಕ್ಕೆ ಅವಕಾಶ ನೀಡುವುದು ಅವಶ್ಯಕವಾಗಿದೆ. ಹೀಗಾಗಿ ಭಕ್ತರು ಸಹಕಾರ ನೀಡುವಂತೆ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ವಿಡಿಯೋ ಸಂದೇಶದ ಮೂಲಕ ಮನವಿ ಮಾಡಿದ್ದಾರೆ.

13,352 ಶಿಕ್ಷಕರ ನೇಮಕ ಸರಾಗ: ಸುಪ್ರೀಂ ಆದೇಶ

» ಮೊದಲನೇ ಪುಟದಿಂದ

ಮೂರ್ತಿಗಳಾದ ಜೆ.ಕೆ.ಮಾಹೇಶ್ವರಿ ಮತ್ತು ವಿಜಯ್ ಬಿಷ್ಣೋಯ್ ಅವರ ಪೀಠವು, ನೇಮಕಾತಿ ಪ್ರಕ್ರಿಯೆಯಿಂದ ಉಂಟಾಗುವ ಸೇವಾ ಸಂಬಂಧಿತ ದೂರುಗಳನ್ನು ಪರಿಹರಿಸಲು ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ (ಕೆಎಸ್‌ಎಟಿ) ಸೂಕ್ತ ವೇದಿಕೆ ಎಂದು ಹೇಳಿದೆ.

2023ರ ಅ.